# ಅಪರಂಜಿ

ತಿಳಿನಗೆಯ ಕಾರಂಜಿ



ಡಿಸೆಂಬರ್ - 2013





# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 31
ಸಂಚಿಕೆ – 3
ಡಿಸೆಂಬರ್ – 2013

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/–
ವಾರ್ಷಿಕ ಚಂದಾ: ರೂ. 100/–
ಹತ್ತು ವರ್ಷದ ಚಂದಾ: ರೂ. 750/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಶಬ್ದ ವಿಲಾಸ | **ಅ.ರಾ. ಮಿತ್ರ** | 6 |
| ದಿಕ್ಕೆಟ್ಟ ಬಾಲಕನ ಪುಟ್ಟ.... | **ಗಣೇಶ ಹೆಗ್ಗಡೆ** | 9 |
| ನಾನೂ ನನ್ನ ಸೆಲ್‌ಫೋನೂ | **ಸಹನಾ ಪ್ರಸಾದ್** | 11 |
| ಈ ವರ್ಷ ಹಿಂಗಾತ?... | **ಪ್ರಶಾಂತ ಅಡೂರ** | 14 |
| ತುಂತುರು | **ದಂನಆ** | 16 |
| ಈ ಚಪ್ಪಲಿಗಳದ್ದೇ ಒಂದು... | **ಡಾ. ನಾ. ಡಿಸೋಜ** | 17 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 21 |
| ಆರೋಗ್ಯ ಮತ್ತು ಸುಳ್ಳು | **ಕೃಷ್ಣ ಸುಬ್ಬರಾವ್** | 22 |
| ಒಂದು ನೆನಪು | **ಬೇಲೂರು ರಾಮಮೂರ್ತಿ** | 25 |
| ಜೂನಿಯರ್ ಲಾಯರ್.... | **ಎಸ್. ರಾಜಗೋಪಾಲಾಚಾರಿ** | 27 |
| ಸುಬ್ಬನ ಮನೆ ಹಬ್ಬ | **ಶ್ರೀನಾಥ ಭಲ್ಲೆ** | 29 |
| ಹನುಮಂತನ ಟಿ.ಎ. ಬಿಲ್ಲು | **ಸಂಪಟೂರು ವಿಶ್ವನಾಥ್** | 33 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 36 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 39 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**

*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
ಪ್ರಕಾಶಕರು *:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಕ್ರಿಕೆಟ್ ಜಗತ್ತಿನ ಸಚ್ಚಿನ್‌ದಾನಂದ ಮೂರ್ತಿಗೆ ಭಾರತರತ್ನಕ್ಕಾಗಿ ಅಪರಂಜಿಯ ಹಾರ್ದಿಕ ಅಭಿನಂದನೆಗಳು

★★★

ಯಡಿಯೂರಪ್ಪ ಅವರನ್ನು ಬಿ.ಜೆ.ಪಿ.ಗೆ ಕರೆತನ್ನಿ – ಹೇಳಿಕೆ

**● ಅವರು ಬರಬೇಕಲ್ಲ !!**

★★★

ರಾಜಕಾರಣಿಗಳಿಂದ ಮೌಲ್ಯ ಕುಸಿತ – ಸ್ವಾಮೀಜೀ ಅವರು

**● ಇದು ನಮಗೆಲ್ಲ ಎಂದೋ ತೋಚಿತ್ತು !!**

★★★

ನೆಮ್ಮದಿ ಬದುಕಿಗೆ ಮೋದಿ ಬೆಂಬಲಿಸಿ – ಹೇಳಿಕೆ

**● ಯಾರ ನೆಮ್ಮದಿ ?!**

★★★

''ಪೋಲೀಸ್ ವರ್ಗಾವಣೆಯಲ್ಲಿ ರಾಜಕೀಯ ಬೇಡ'' – ರಾಜ್ಯಪಾಲರು

**● ಅರಣ್ಯರೋದನ ಎಂದರೆ ಇದೇ !!**

★★★

ಸಚಿವರು, ಶಾಸಕರ ಮನೆಗೆ ಕಬ್ಬು ಬೆಳೆಗಾರರ ಮುತ್ತಿಗೆ – ಸುದ್ದಿ

**● ಕಹಿ ಸುದ್ದಿ ?!**

★★★

''ಈರುಳ್ಳಿ'' ಎಂದ ಕೂಡಲೆ ಕಣ್ಣೀರು ಬರುತ್ತಲ್ಲ ಎಂದು ಅಪರಂಜಿ ನಕ್ಕಳಂತೆ !!

★★★

ಯಾವುದು ನಂಬಿಕೆ, ಯಾವುದು ಮೂಢನಂಬಿಕೆ ಎಂಬುದರ ಬಗ್ಗೆ ಇನ್ನಷ್ಟು ಚರ್ಚೆ ಅಗತ್ಯ – ಪತ್ರಿಕೆ

**● ಭರತವರ್ಷದಲ್ಲಿ ಇದು ನಿಗೂಢವಾಗಿಯೇ ಉಳಿಯುತ್ತೆ !!**

★★★

ತಪ್ಪಿಗೂ ಅಪರಾಧಕ್ಕೂ ವ್ಯತ್ಯಾಸವಿದೆ – ಪ್ರಧಾನಿ

**● ವಿವೇಕಚೂಡಾಮಣಿ ತೆಗೆದು ನೋಡಬೇಕು !!**

★★★

# ನಮ್ಮ ನಿಮ್ಮಲ್ಲಿ

**ಮೊ**ನ್ನೆ ಒಂದು ಅಪೂರ್ವ ವಿನ್ಯಾಸದ ಸಂಗೀತ ಕಛೇರಿಗೆ ಹೋಗುವ ಅವಕಾಶ ಒದಗಿ ಬಂದಿತ್ತು. ಸುನಾದ್ ಎಂಬ ಹಾಡುಗಾತಿಯರ ಗುಂಪೊಂದು ಬೆಂಗಳೂರಿನ ಸಭಾಂಗಣವೊಂದರಲ್ಲಿ ''ಈಶ-ರೂಮಿ ಬಿಯಾಂಡ್ ಫಾರ್ಮ್'' ಎಂಬ ಹೆಸರಿನಲ್ಲಿ ಒಂದು ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈಶಾವಾಸ್ಯ ಉಪನಿಷತ್ತಿನ ಹಲವು ಶ್ಲೋಕಗಳು ಹಾಗೂ ಜಲಾಲುದ್ದೀನ್ ರೂಮಿ ಎಂಬ ಸೂಫಿ ಕವಿಯ ಹಲವು ಕವನಗಳನ್ನು ಧ್ರುಪದ್ ಶೈಲಿಯಲ್ಲಿ ಸುನಾದ್ ಗುಂಪು ಬಹು ಇಂಪಾಗಿ ಹಾಡಿ ತೋರಿಸಿದರು. ಹಾಡಿಗೆ ಜೊತೆಜೊತೆಯಾಗಿ ಒಬ್ಬ ಸೂತ್ರಧಾರ ಮತ್ತು ಇಬ್ಬರು ಕಥಕರು ಉಪನಿಷತ್ತಿನ ಶ್ಲೋಕಗಳ ಸರಳ ವ್ಯಾಖ್ಯಾನ ಹಾಗೂ ರೂಮಿ ಕವಿಯ ಹಲವು ಸೂಫಿ ಕಥೆಗಳನ್ನು ಬಹು ಸ್ವಾರಸ್ಯವಾಗಿ ವೇದಿಕೆಯ ಮೇಲೆ ಬಿಂಬಿಸಿದ್ದು ಈ ಕಾರ್ಯಕ್ರಮದ ವಿಶೇಷ.

ರೂಮಿಯ ಕವನದಲ್ಲಿ ''ಅನಲ್ ಹಕ್'' ಎಂಬ ಪದಪ್ರಯೋಗವಿದೆ. ''ನಾನೇ ಸತ್ಯ'' ಎಂದು ಇದರ ಅರ್ಥ. ವೇದಾಂತದ ಮಹಾವಾಕ್ಯ ''ಅಹಂ ಬ್ರಹ್ಮಾಸ್ಮಿ'' ಇದೇ ಅರ್ಥವನ್ನು ಕೊಡುತ್ತಿದ್ದು ಈ ಎರಡು ವಿಭಿನ್ನ ಪದ್ಧತಿಗಳ ಮಿಶ್ರಣ ಬಹು ಚೆನ್ನಾಗಿ ಮೇಳೈಸಿತ್ತು. ಹಿಂದೂಸ್ಥಾನೀ ಸಂಗೀತ ಪರಂಪರೆಯಲ್ಲಿ ಬಹು ಹಳೆಯದಾದ ಧ್ರುಪದ್ ಶೈಲಿ ಈ ಶ್ಲೋಕಗಳ ಮುಖ್ಯ ಭಾವವಾದ ಸತ್ಯ ಮತ್ತು ಭಕ್ತಿ ಇವುಗಳನ್ನು ಚೆನ್ನಾಗಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದು ಕಾರ್ಯಕ್ರಮದ ನಿರ್ಮಾಪಕಿ ಶ್ರೀಮತಿ ತಾರಾ ಕಿಣಿ ಅವರ ಸೃಜನಶೀಲತೆಗೆ ಸಾಕ್ಷಿ.

ಹದಿಮೂರನೆಯ ಶತಮಾನದಲ್ಲಿದ್ದ ಜಲಾಲುದ್ದೀನ್ ರೂಮಿ ಒಬ್ಬ ಸೂಫಿ ಸಂತ. ಸಂಗೀತ, ಕವನಗಳು ಮತ್ತು ನರ್ತನ ದೈವ ಸಾಕ್ಷಾತ್ಕಾರಕ್ಕೆ ಹಾದಿ ಎಂಬ ಪ್ರಬಲ ನಂಬಿಕೆ ರೂಮಿಯದು. ಈತ ಸೃಷ್ಟಿಸಿದ ಪ್ರಯೋಗಗಳೇ ಮುಂದೆ ವ್ಹರ್ಲಿಂಗ್ ಡೆರ್ವಿಷಸ್ ಎಂಬ ಮಧ್ಯಪ್ರಾಚ್ಯದ ಭಕ್ತಿ ನರ್ತನಕ್ಕೆ ನಾಂದಿಯಾದವು. ಹಾಡು ಮತ್ತು ನರ್ತನ ಮೇಳೈಸಿರುವ ಸಾಮ ಎಂಬ ಧ್ಯಾನ ಪದ್ಧತಿ ಮನಸ್ಸನ್ನು ಮೀರಿ ಶುದ್ಧ ಸತ್ಯದೆಡೆಗೆ ಸಾಗುವ ಮಾರ್ಗ ಎಂದು ಸೂಫಿಸಂತರ ನಂಬಿಕೆ.

ಆ ಸಂಜೆ ಕಥಕರು ಹೇಳಿದ ಒಂದು ಕತೆ ಹೀಗಿದೆ. ಒಬ್ಬಾತ ಒಮ್ಮೆ ತನ್ನ ಗೆಳೆಯನ ಮನೆಗೆ ಹೋಗಿ ಬಾಗಿಲು ತಟ್ಟುತ್ತಾನೆ. ಒಳಗಿನಿಂದ ''ಯಾರು ನೀನು?'' ಎಂಬ ಪ್ರಶ್ನೆ ಕೇಳಿಸುತ್ತದೆ. ಈತ, ''ನಾನು ನಿನ್ನ ಗೆಳೆಯ. ಒಳಗೆ ಬರಬಹುದೇ?'' ಎಂದು ಕೇಳುತ್ತಾನೆ. ''ಇಲ್ಲ, ಇಲ್ಲಿ



**ರುಮಿ ತನ್ನ ಶಿಷ್ಯರೊಂದಿಗೆ**

ನಿನಗೆ ಜಾಗವಿಲ್ಲ'' ಎಂಬ ನಿಷ್ಠುರ ಉತ್ತರ ಬರುತ್ತದೆ. ಖಿನ್ನ ಮನಸ್ಸಿನಿಂದ ಈ ವ್ಯಕ್ತಿ ಅಲ್ಲಿಂದ ಹೊರಟು ಇಪ್ಪತ್ತು ವರ್ಷಗಳ ಕಾಲ ಊರೂರು ಸುತ್ತುತ್ತಾನೆ. ಕೊನೆಗೆ ಮತ್ತೆ ಹಿಂದಕ್ಕೆ ಗೆಳೆಯನ ಮನೆಗೆ ಬಂದು ಬಾಗಿಲು ತಟ್ಟುತ್ತಾನೆ. ಪುನಃ ಒಳಗಿನಿಂದ ''ಯಾರು ನೀನು?'' ಎಂಬ ಪ್ರಶ್ನೆ ಕೇಳಿಸುತ್ತದೆ. ಈತ ''ನಾನು ನೀನೇ, ಒಳಗೆ ಬರಬಹುದೇ'' ಎಂದಾಗ ಬಾಗಿಲು ತೆರೆಯುತ್ತದೆ. ಒಳಗಿನ ಗೆಳೆಯ ''ಈ ಮನೆಯಲ್ಲಿ ಇಬ್ಬರಿಗೆ ಜಾಗವಿಲ್ಲ'' ಎಂದು ಹೇಳುತ್ತಾ ಬಂದ ಗೆಳೆಯನನ್ನು ಅಪ್ಪಿ ಸ್ವಾಗತಿಸುತ್ತಾನೆ.

ಒಟ್ಟಿನಲ್ಲಿ ಸುನಾದ್ ಹಾಡುಗಾತಿಯರ ಗಾಯನ ಕೇಳುತ್ತಾ ಒಂದು ಸುಮಧುರ ಸಂಜೆ ಕಳೆದದ್ದಾಯಿತು.

**ಶಿವಕುಮಾರ್**

---

**ಕಳೆದ ಅನೇಕ ವರ್ಷಗಳಿಂದ ನಮ್ಮ ಟ್ರಸ್ಟ್ ಜಯನಗರದ ನ್ಯಾಷನಲ್ ಕಾಲೇಜ್ ಸಭಾಂಗಣದಲ್ಲಿ ಹಾಸ್ಯೋತ್ಸವ ಎಂಬ ನಗೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿರುವುದು ಅಪರಂಜಿಯ ಎಲ್ಲ ಅಭಿಮಾನಿಗಳಿಗೂ ತಿಳಿದಿರುವ ಸಂಗತಿ. ಕಾರ್ಯಕ್ರಮಗಳು ಚೆನ್ನಾಗಿ ಮೂಡಿಬರುತ್ತಿದ್ದರೂ ದಿನಕ್ರಮೇಣ ಹಾಸ್ಯದ ಗುಣಮಟ್ಟ ನಮ್ಮ ನಿರೀಕ್ಷೆಗೆ ತಕ್ಕಂತೆ ಬರುತ್ತಿಲ್ಲ ಎಂಬ ಭಾವನೆ ನಮ್ಮಲ್ಲಿ ಮೂಡಿದ್ದರಿಂದ, ಈ ಬಾರಿ ನಮ್ಮ ಈ ಹಾಸ್ಯೋತ್ಸವ ಕಾರ್ಯಕ್ರಮಕ್ಕೆ ವಿರಾಮ ಕೊಡಲು ನಿರ್ಧರಿಸಿದ್ದೇವೆ. ಹಾಗಾಗಿ ಡಿಸೆಂಬರ್ 25, 2013ರಂದು ಜಯನಗರದ ನ್ಯಾಷನಲ್ ಕಾಲೇಜಿನಲ್ಲಿ ನಮ್ಮ ಕಾರ್ಯಕ್ರಮ ಇರುವುದಿಲ್ಲ. ಅಭಿಮಾನಿಗಳು ಗಮನಿಸಬೇಕಾಗಿ ವಿನಂತಿ.**

**ಶಿವಕುಮಾರ್**

---

**25.12.2013 ಕನ್ನಡದ ಹಾಸ್ಯ ಕ್ಷೇತ್ರಕ್ಕೆ ಹೊಸದೊಂದು ದಿಕ್ಕನ್ನು ತೋರಿಸಿಕೊಟ್ಟ ಶ್ರೀ ನಾ. ಕಸ್ತೂರಿಯವರ ಜನ್ಮದಿನ. ಅಪರಂಜಿಯ ಎಲ್ಲ ಓದುಗರ ಪರವಾಗಿ ಶ್ರೀ. ನಾ. ಕಸ್ತೂರಿಯವರಿಗೊಂದು ಶ್ರದ್ಧಾಂಜಲಿ.**

# ಅಪರಂಜಿಗೆ ಶುಭಾಶಯಗಳು



ಶ್ರೀ ಶ್ರೀಧರ್ ಎಸ್. ಗೋವಿಂದರಾಜ

# ಶಬ್ದ ವಿಲಾಸ

**- ಅ.ರಾ. ಮಿತ್ರ**

**ಮಂ**ಗಳೂರು ಕಡೆ ಹಿಂದಿನ ವಿದ್ವಾಂಸರು ಡಿಸೆಂಬರ್‌ಗೆ ಬದಲಾಗಿ ದಶಂಬರ ಎನ್ನುತ್ತಿದ್ದರು. ಗ್ರಿಗೋರಿಯನ್ ಕ್ಯಾಲೆಂಡರ್ ಪ್ರಕಾರ ಇದು ವರ್ಷದ 12ನೆಯ ಮತ್ತು ಕೊನೆಯ ತಿಂಗಳು. ಹತ್ತು ಎಂಬ ಅರ್ಥ ಕೊಡುವ 12ನೆಯ ತಿಂಗಳು ಇದು. ಹೇಗೆಂದು ಹುಡುಕಿದೆ. ಮೊದಲು ಕ್ಯಾಲೆಂಡರ್‌ನಲ್ಲಿ ಇದ್ದದ್ದು ಹತ್ತೇ ತಿಂಗಳು. ಆದ್ದರಿಂದ ಡಿಸೆಂಬರ್ ಸರಿ. ಆದರೆ ಇತಿಹಾಸ ಪುರುಷರಿಂದಾಗಿ ತಿಂಗಳ ಕೋಶಕ್ಕೆ ಜುಲೈ ಮತ್ತು ಆಗಸ್ಟ್ ತಿಂಗಳುಗಳು ಸೇರಿಕೊಂಡವು. ಜೂಲಿಯಸ್ ಸೀಸರ್ ಹೆಸರು ವರ್ಷ ಮಾಲೆಯಲ್ಲಿ ಬರಲೇಬೇಕೆಂದು ಪಂಚಾಂಗಕರ್ತರು ತೀರ್ಮಾನಿಸಿದರು. ಮುಂದೆ ಆಗಸ್ಟಸ್ ಸೀಸರ್ ಚಕ್ರವರ್ತಿಯಾದನಲ್ಲವೆ? ಆಗ ಆಗಸ್ಟ್ ಎಂಬ ತಿಂಗಳೂ ಪಟ್ಟಿಗೆ ಸೇರಿತು. ಸೀಸರ್‌ನಂತೆಯೇ ಅಗಸ್ಟಸನಿಗೂ 31 ದಿನಗಳನ್ನೇ ಗೊತ್ತುಪಡಿಸಲಾಯಿತು. ಬಡ ಸೆಪ್ಟೆಂಬರ್ (7ನೇ ತಿಂಗಳು), ಅಕ್ಟೋಬರ್ (8ನೇ ತಿಂಗಳು), ನವೆಂಬರ್ (9ನೇ ತಿಂಗಳು) ತಮ್ಮ ಹಳೆಯ ಹೆಸರಿನಿಂದಲೇ ರಂಜಿಸಿದವು ಎಂದು ಇತಿಹಾಸ ನನಗೆ ತಿಳಿಸಿತು. ರಾಜರು ಮನಸ್ಸು ಮಾಡಿದರೆ ಜನರಿಗೆ ಒಪ್ಪದೆ ಬೇರೆ ವಿಧಿಯೇ ಇರಲಿಲ್ಲವಲ್ಲ. ಈ ಮಧ್ಯೆ ಅಕ್ಟೋಬರ್ ಎಂಬುದು ಅಷ್ಟಾಂಬರ, ನವೆಂಬರ್ ನವಾಂಬರ, ಸೆಪ್ಟೆಂಬರ್ ಎಂಬುದು ಸಪ್ತಾಂಬರ ಎಂಬ ವಾದವೂ ಇದೆ.

**ಹೆಸರಿನಲ್ಲಿ ಏನಿದೆ? ಎಲ್ಲವೂ ಇದೆ. ಹೇಗೆ ಎಂಬುದು ಈ ಲೇಖನದಲ್ಲಿದೆ.**

ಶಬ್ದಗಳು ಸಂಚರಿಸುವ ಕ್ರಮವೂ ಅದ್ಭುತವಾದದ್ದು. ಪೆದ್ದ ಶಿಖಾಮಣಿಯಲ್ಲಿರುವ ಪೆದ್ದ ಕನ್ನಡದಲ್ಲಿ ದಡ್ಡನಾದರೆ ತೆಲುಗಿನಲ್ಲಿ ದೊಡ್ಡ ಮನುಷ್ಯ. ನೇರ ಎಂಬ ಶಬ್ದ ಕನ್ನಡದಲ್ಲಿ ವಕ್ರವಲ್ಲದ್ದು ಎಂಬ ಅರ್ಥ ಕೊಟ್ಟರೆ ತೆಲುಗಿನಲ್ಲಿ ನೇರ ಎಂಬುದು ಅಪರಾಧ ಎಂದಾಗುತ್ತದೆ. ತಮಿಳಿನಲ್ಲಿ ನೇರ ಎಂದರೆ ಸಮಯ. ಕಳ್ಳ ಎಂದರೆ ಕದಿಯುವವನು ಎಂಬರ್ಥವಿದ್ದರೆ ನಾವು ಮಕ್ಕಳನ್ನು ಆಡಿಕೊಳ್ಳುವಾಗ 'ಛೀ! ಕಳ್ಳ!' ಎನ್ನುತ್ತೀವಲ್ಲ ಏಕೆ? ಕಳ್ಳನ ಒಂದು ಗುಣ ಆಕರ್ಷಣೆ, ಸೆಳೆದುಕೊಳ್ಳುವುದು ತಾನೆ? ಇಲ್ಲಿ ಪುಟ್ಟ ಮಗು ನಮ್ಮ ಮನ ಸೆಳೆಯುವುದರಿಂದ ಅದಕ್ಕೆ ಕಳ್ಳ ಎಂಬ ಹೆಸರು ಮಗುವಿಗೆ ಅಂಟಿದೆ. 'ಹಲ್ಕ' ಎಂದರೆ ದುಷ್ಟ ನಡತೆಯವನು ಎಂದರ್ಥ. ಆದರೆ ಹಿಂದಿಯಲ್ಲಿ ಅದೇ ಶಬ್ದ ಹಗುರ ಎನ್ನಿಸುತ್ತದೆ. ಹಗುರ ನಡತೆಯವನು ಎಂದು ಈ ಶಬ್ದದ ಅರ್ಥ. 'ಹಗುರ' ನಡತೆಯವನು ದುಷ್ಟನಲ್ಲವೆ? ಹಾಗಂತ ನಮ್ಮ ಹೆಣ್ಣು ಮಗಳು ಒಬ್ಬಳು ನನ್ನ ಗಂಡ ಹಲ್ಕ ಎಂದು ಹೇಳಿದರೆ ತಪ್ಪೇನಿಲ್ಲ. ಆದರೆ ಜನರಿಗೆ ಅರ್ಥವಾಗುವುದಿಲ್ಲ. ಹಾಗೇ 'ನೀಚ' ಶಬ್ದವನ್ನು ನೋಡಿ. ಸಂಸ್ಕೃತದಲ್ಲಿ ಇದು ದಿಕ್ಕು ತೋರಿಸುವ ಶಬ್ದ. ಉಚ್ಚ ಎಂದರೆ ಮೇಲೆ ನೀಚ ಎಂದರೆ ಕೆಳಗೆ ಎಂದಲ್ಲವೆ? ಕೆಳಗಿನವನು ಎಂದರೆ ದುಷ್ಟ ಮಾನ ಮರ್ಯಾದೆಗಳು ಇಲ್ಲದವನು ಎಂಬರ್ಥ ಕನ್ನಡದ್ದು.

ಅನ್ನದ ಋಣ ನಮಗೆಲ್ಲಾ ಅರ್ಥವಾಗುತ್ತದೆ. ಆದರೆ ಜೋಳದ ಋಣ ಎಂದರೆ? ಅದೂ ಅನ್ನದ ಋಣ ಅಲ್ಲವೆ? ಹಳೆಯ ಮೈಸೂರು ಭಾಗದಲ್ಲಿ ಅನ್ನ ಬಳಕೆ ಹೆಚ್ಚು. ಧಾರವಾಡ ಬಿಜಾಪುರಗಳಲ್ಲಿ ಅನ್ನದ ಬದಲು ಜೋಳದ ಬಳಕೆ ಹೆಚ್ಚು.

ರೈಲು ಎಂದರೆ ನಿಜವಾಗಿ ಕಬ್ಬಿಣದ ದಾರಿಗಂಬಿಗಳು ಎಂದರ್ಥವಲ್ಲವೆ? ರೈಲು ಪ್ರಯಾಣ ಎಂದರೆ ಬೋಗಿಗಳಲ್ಲಿ ಕುಳಿತು ಪ್ರಯಾಣ ಮಾಡುವುದು ಎಂಬರ್ಥ ಬಂದು ಬಿಟ್ಟಿದೆ. ಬೋಗಿ ಎಂದರೆ ಧಾರವಾಡದವರಿಗೆ ಅರ್ಥವಾಗುವುದಿಲ್ಲ, ಅವರು ಡಬ್ಬಿ ಎನ್ನುತ್ತಾರೆ.

ಹನುಮಂತನಿಗೆ 'ಹುಚ್ಚಯ್ಯ' ಎಂಬ ಹೆಸರು ಬಂದಿದೆಯಲ್ಲ ಹೇಗೆ? ಇಲ್ಲಿ ಹುಚ್ಚ ಎಂದರೆ ಮರುಳ. ತಲೆ ಕೆಟ್ಟವನು ಎಂಬರ್ಥವಿಲ್ಲ. ನಮ್ಮಲ್ಲಿ ಹಿಂದೆ ಹುಚ್ಚಪ್ಪ, ಹುಚ್ಚೂರಾಯ ಇರುತ್ತಿದ್ದರು. 'ಹುಚ್ಚ'ದ ಸಂಸ್ಕೃತ ಮೂಲ 'ಪೃಚ್ಛ'. ಪೃಚ್ಛ ಎಂದರೆ ಬಾಲ. ಆದ್ದರಿಂದ ಬಾಲದಯ್ಯ ಎಂದರೆ ಹನುಮಂತ.

*ಮಾನವ ದೊಡ್ಡದು*

*ಇದನು ಹಾಳು ಮಾಡಲು ಬೇಡಿ ಹುಚ್ಚಪ್ಪ ಗಳಿರಾ* ಎಂದರೆ ಕೋತಿಗಳಿರಾ ಎಂದರ್ಥ.

ಹಳಗನ್ನಡದ 'ಪ' ಶಬ್ದಗಳೆಲ್ಲ 'ಹ'ಕಾರವಾಗಿ ಬಿಟ್ಟವು. ಪಾಲು-ಹಾಲು, ಪಳ್ಳಿ-ಹಳ್ಳಿ, ಪಿಂಡು-ಹಿಂಡು, ಪೊನ್-ಹೊನ್ನು, ಪಂಚು-ಹಂಚು, ಪೋಳು-ಹೋಳು, ಪಂಜರ-ಹಂಜರ, ಪಾವು-ಹಾವು, ಪುಳು-ಹುಳು, ಪುಲಿ-ಪುಳಿ, ಪೆಂಡೆ-ಹೆಂಟೆ, ಪಲ್ಮಿಡಿ-ಹಲ್ಮಿಡಿ ಶಾಸನ, ಪೊಳೆ-ಹೊಳೆ ಇಂಥ ನೂರಾರು ಉದಾಹರಣೆಗಳನ್ನು ಕೊಡಬಹುದು. ಆದರೆ ನಮ್ಮ ಜನ ಇದಕ್ಕೂ ಒಂದು ನಿಯಮ ಇರಿಸಿಕೊಂಡಿದ್ದಾರೆ. ಸಂಸ್ಕೃತ ಶಬ್ದಗಳನ್ನು ಜನ ಬದಲಾಯಿಸಲೇ ಇಲ್ಲ. ಪದ್ಮ, ಪಾಪಿ, ಪೀಠ, ಪಿತ್ತ, ಪುತ್ರ, ಪಾಣಿಗ್ರಹಣ, ಪುಣ್ಯ, ಪೆಯ, ಪಿತೃ, ಪಾಮರ ಇತ್ಯಾದಿ. ಜನಸಾಮಾನ್ಯರಿಗೆ ಇವೆಲ್ಲ ಸಂಸ್ಕೃತ ಶಬ್ದಗಳೆಂದು ಹೇಗೆ ತಿಳಿಯಿತು ಎಂದು ಪ್ರಶ್ನೆ ಹಾಕಿದರೆ ನನ್ನಲ್ಲಿ ಅದಕ್ಕೆ ಉತ್ತರವಿಲ್ಲ. ಗ್ರಹಿಕೆಯ ನೆಲೆಯಲ್ಲಿ ಅವರಿಗೆ ಈ ಅಂಶ ಗೊತ್ತಾಗಿರುತ್ತದೆ ಎಂದಷ್ಟೆ ಹೇಳಬಹುದು. ಹಾಗಿಲ್ಲದಿದ್ದರೆ ಪದ್ಯ 'ಹದ್ಯ' ಆಗಬೇಕಾಗುತ್ತಿತ್ತಲ್ಲವೆ?

ಈಗ ಪೋಲಿ, ಪುಂಡ, ಪೀಡೆ, ಪಟಾಲಂ, ಪೋಕರಿಗಳಲ್ಲಿ ಪಕಾರವೇ ಇದೆ - ಹೇಗೆ ಎನ್ನುತ್ತೀರಾ? ಇವೆಲ್ಲ ತೆಲುಗು ತಮಿಳುಗಳಿಂದ ಬಂದ ಎರವಲು ಶಬ್ದಗಳು. ಇವು ಪಕಾರಗಳೆಲ್ಲ ಹಕಾರವಾಗಿ ಪರಿವರ್ತನೆಗೊಂಡ ಎಷ್ಟೋ ಕಾಲದ ನಂತರ ಬಂದು ಸೇರಿದ ಶಬ್ದಗಳು.

ಪುಟ್ಟಣ್ಣ, ಪುಟ್ಟಪ್ಪ ಇಲ್ಲಿ ಪಕಾರವೇ ಉಳಿದುಕೊಂಡಿರುವುದಕ್ಕೆ ಕಾರಣವಿದೆ. ಪುಟ್ಟ ಶಬ್ದಕ್ಕೆ ಹುಟ್ಟುಕುರುಡ ಎನ್ನುವಾಗ 'ಪ' 'ಹ' ಆಗಿದೆ. ಆದರೆ ಚಿಕ್ಕದು ಎಂಬರ್ಥ ಬಂದಾಗ ಪಕಾರವೇ ಉಳಿದುಕೊಂಡಿದೆ. ಮನೆಪಾಲಾಯಿತು ಎಂದಾಗ ವಿಭಜನೆ ಎಂಬರ್ಥದಲ್ಲಿ 'ಪ' ಬಳಸುತ್ತೇವೆ. ಕ್ಷೀರ ಎಂಬರ್ಥದಲ್ಲಿ 'ಹಾಲು' ಆಗುತ್ತದೆ. ಹಾಡು ಪಾಡು ಶಬ್ದ ನೋಡಿ.

ಒಂದು ಪಾಡು ಶಬ್ದಕ್ಕೆ ಹಾಡು ಹೇಳು ಎಂಬರ್ಥದಲ್ಲಿ ಹಾಡು ಆಗಿದೆ. ಆದರೆ ನಮ್ಮ ಪಾಡು, ಗೋಳು ಏನು ಹೇಳಲಿ ಎಂದಾಗ ಅದು 'ಪಾಡು' ಆಗುತ್ತದೆ. ಪೂರ್ಣಿಮಾ ಎಂಬ ಸಂಸ್ಕೃತ ಶಬ್ದ ಮೊದಲು ಪುಣ್ಣಿಮೆ ಎಂದಾಗಿ ಅನಂತರ ಪಕಾರ ಹಕಾರಕ್ಕೆ ತಿರುಗಿರಬೇಕು. 'ಪಂಜು' ಎಂಬ ಶಬ್ದ ಹೊಸಗನ್ನಡದಲ್ಲೂ ಎಂದೇ ಬಳಕೆಯಲ್ಲಿದೆ. ಹುಂಬ ಹಸನುಗಳ ಪಾಡೂ ಇದೇ. 'ಪುಡಿ' ಎಂಬ ಶಬ್ದ ಈಗಲೂ ಪುಡಿ, ಹುಡಿ ಎರಡು ರೂಪಗಳಲ್ಲೂ ಕಂಡು ಬರುತ್ತದೆ. ಮಡಿಕೇರಿಯಲ್ಲಿ ಕಾಫಿ ಹುಡಿ ಎಂದೇ ಹೇಳುತ್ತಾರೆ.

ಎರವಲು ಶಬ್ದಗಳ ಮೂಲಾರ್ಥ ತಿಳಿಯದಿದ್ದರೆ ಏನಾಗುತ್ತದೆ ಗೊತ್ತೆ? ಈಗ ಬೆಣ್ಣೆ ಮುರುಕು ಎಂಬ ಶಬ್ದ ನೋಡಿ. ಬೆಣ್ಣೆಯಲ್ಲಿ ಕರಿದ ಚಕ್ಕುಲಿಯ ತುಂಡುಗಳು ಎಂದು ನಾವಿಲ್ಲಿ ಅರ್ಥ ಮಾಡಿಕೊಂಡಿದ್ದೇವೆ. ಆದರೆ ಅದು ತಮಿಳು ಶಬ್ದ. ತಮಿಳಿನಲ್ಲಿ ಮುರುಕ್ಕು ಎಂದರೆ ಚಕ್ಕಲಿ ಎಂದೇ ಅರ್ಥ. ನೋಡಿ ಹೇಗಿದೆ ಶಬ್ದವಿಲಾಸ. ಸಿದ್ಧರಾಮ ಎಂಬ ವಚನಕಾರನ ''ಮನೆಯಲ್ಲಿದ್ದ ಬೆತ್ತಗಳು

ಮನೆಯ ಮೀರಿ ಮೀರಿ ಹಾರಬಾರದಯ್ಯ'' ಎಂದು ಹೇಳುತ್ತಾನೆ. ಅಂದರೆ ಗರಕ್ಕೆ ತಕ್ಕಂತೆ ಪಗಡೆಕಾಯಿ(ಬೆತ್ತ)ಗಳು ಮುಂದೆ ಮುಂದೆ ಚಲಿಸುತ್ತಲೇ ಇರಬೇಕಲ್ಲವೆ! ಕೈಲಾಸಂ ಹೇಳುವ 'ಮಾತೂ ಆಡಬೇಕು ಮೀನಿಂಗೂ ಇರಬಾರದು' ಎಂಬುದು ಶಬ್ದದ ಯಾವ ವಿಭಾಗಕ್ಕೆ ಸೇರಿಸಬೇಕು ಹೇಳಿ.

✷

---

## ಓದುಗರ ಅಭಿಪ್ರಾಯ

ಮಾನ್ಯ ಶ್ರೀ ಬೇಲೂರು ರಾಮಮೂರ್ತಿಯವರು,

ಉಪ ಸಂಪಾದಕರು ''ಅಪರಂಜಿ'' ಪತ್ರಿಕೆ, ಬೆಂಗಳೂರು ಇವರಿಗೆ

''ಅಪರಂಜಿ'' ಪತ್ರಿಕೆಯಲ್ಲಿ ಪ್ರಕಟವಾದ ಶ್ರೀಮತಿ ಆರತಿ ಅವರ ಹಾಸ್ಯದ ಕಥೆ ''ಅಜ್ಜಿಗೂ ಅಂಟಿತು ಫೇಸ್ಬುಕ್ ಗೀಳು'' ಓದಿ ತುಂಬಾ ಖುಷಿಯಾಯ್ತು. ಅವರ ಪ್ರತಿಭೆಗೊಂದು ನನ್ನ ಮೊದಲ ಅಭಿನಂದನೆ. ಪ್ರಬುದ್ಧವಾದ ಕವನ, ಹಾಸ್ಯ, ವಾಸ್ತವತೆಗಳ ಹನಿಗವನ ಪ್ರಸ್ತುತ ಹಾಸ್ಯಕಥೆಗಾರರಿಗಿಂತ ತಾವೇನೂ ಕಡಿಮೆಯಿಲ್ಲ ಎನ್ನುವಂತೆ ನಗಿಸುವ, ನಲಿಸುವ ನಿತ್ಯದ ಬದುಕಿನ ನೈಜ ತಿಳಿಹಾಸ್ಯ ತುಂಬಿರುವ ವಿನೂತನ ಶೈಲಿಯ ಕಥೆ ತುಂಬಾ ಚೆನ್ನಾಗಿದೆ. ಫೇಸ್ಬುಕ್‌ನ ವಾಸ್ತವ ಸತ್ಯವ ಅಜ್ಜಿಗೂ ಅಂಟಿಸುವ ಮೊಮ್ಮಗ ರಾಜು ''ಅಜ್ಜಿಗೂ ಅಂಟಿತು ಫೇಸ್ಬುಕ್ ಗೀಳು'' ಕಥೆ ಕಥಾವಸ್ತುವಿನ ಹಿಡಿತ ಚೆನ್ನಾಗಿದೆ. ಅಲ್ಲಲ್ಲಿ ಹನಿಗವನಗಳ ಹಾಸ್ಯದ ''ಪಂಚ್'' ಓದುಗರ ಮನಸೆಳೆಯುತ್ತವೆ. ನಿಮ್ಮ ಕಥಾ ನಿರೂಪಣಾ ಶೈಲಿ ಸೊಗಸಾಗಿದೆ. ಭವಿಷ್ಯದ ಉತ್ತಮ ಕಥೆಗಾರ್ತಿಯಾದರೂ ತಪ್ಪೇನಿಲ್ಲ. ಈ ಕಥೆಗಾರ್ತಿಯ ಲೇಖನಿಯಿಂದ ಇನ್ನೂ ಹೆಚ್ಚಿನ ಕಥೆಗಳು ಹರಿದು ಬರಲಿ. ಶುಭಹಾರೈಸುವ

ಈರಣ್ಣ ಮೂಲೀಮನಿ (ಕಸ್ತೂರಿಪ್ರಿಯ), ದುಬೈ

# ದಿಕ್ಕೆಟ್ಟ ಬಾಲಕನ ಪುಟ್ಟ ಬಯಕೆ

**- ಗಣೇಶ ಹೆಗ್ಗಡೆ**

**ನ**ಲ್ಮೆಯ ಗಾಂಧಿ ತಾತನವರಿಗೆ,

ಬಾಲಕ ಸತ್ಯಮೂರ್ತಿ ಮಾಡುವ ಕಷ್ಟಾಂಗ ನಮಸ್ಕಾರಗಳು.

ಈಗಾಗಲೇ ತಮಗೆ ಮನದಟ್ಟಾಗಿರುವಂತೆ ಇಲ್ಲಿ ಎಲ್ಲವೂ ಕ್ಷೇಮವಲ್ಲ. ನಮ್ಮ ಹೆಣ್ಣುಮಕ್ಕಳಿಗಂತೂ ತೀರಾ ಭಯ-ಭೀತಿ ಪಡುವ ವಾತಾವರಣ. ಸ್ವಾತಂತ್ರ್ಯ ಘೋಷಣೆಯ ಸಂದರ್ಭದಲ್ಲಿ ತಾವು ಒಂದು ನಿಜ ನುಡಿದಿದ್ದೀರಿ ನೆನಪಿದೆಯೇ? ''ಇದು ನಮಗೆ ದಕ್ಕಿರುವ ನಿಜವಾದ ಸ್ವಾಂತಂತ್ರ್ಯವಲ್ಲ, ನಮ್ಮ ಹೆಣ್ಣು ಮಕ್ಕಳು ಎಂದು? ಮಧ್ಯರಾತ್ರಿಯಲ್ಲಿ ಭಾರತೀಯ ರಸ್ತೆಗಳಲ್ಲಿ ನಿರ್ಭಯದಿಂದ ತಿರುಗಾಡುವಂತಾಗುತ್ತದೆಯೋ ಅಂದೇ ನಮಗೆ ನಿಜವಾದ ಸ್ವಾಂತಂತ್ರ್ಯ. ತಾತ, ಇಲ್ಲಿ 'ಮಧ್ಯರಾತ್ರಿ' ಎಂಬ ಪದವನ್ನು ಅಪಭ್ರಂಶಗೊಳಿಸಿದರೆ ತಮಗೆ ದೇಶದ ಹಾಲಿ ಪರಿಸ್ಥಿತಿ ಅರಿವಾಗುತ್ತದೆ. ಪ್ರತಿಯೊಂದು ಸಿಟಿಯ/ಟೌನಿನ/ಹಳ್ಳಿಗಳ ಮೂಲೆ ಮೂಲೆ ರಸ್ತೆಗಳಲ್ಲಿ ಸಾರಾಯಿ ಅಂಗಡಿಗಳು/ಬಾರ್‌ಗಳು ನಾಯಿಕೊಡೆಗಳಂತೆ ತಲೆಎತ್ತಿ ನಿಂತಿವೆ. ಈಗ, ಇಲ್ಲಿ ಮಧ್ಯರಾತ್ರಿಯ ವಾತಾವರಣ 'ಮದ್ಯ'ರಾತ್ರಿಯ ವಾತಾವರಣವಾಗಿ ಮಾರ್ಪಟ್ಟು, ಹೆಣ್ಣುಮಕ್ಕಳಿರಲಿ ಗಂಡಸರೇ ತಿರುಗಾಡದಂಥಹ ಸ್ಥಿತಿ ಬಂದು ಬಿಟ್ಟಿದೆ. ಚಿನ್ನ/ಬೆಳ್ಳಿಯ ಬೆಲೆ ಗಗನಕ್ಕೇರಿ ದರೋಡೆಕೋರರ/ಸರಗಳ್ಳರ ಹಾವಳಿ ವಿಪರೀತವಾಗಿದೆ. ಈಗ ಅವರ ಕಣ್ಣು ದೇವರು/ದೇವಸ್ಥಾನಗಳ ಮೇಲೂ ತಿರುಗಿಬಿದ್ದಿದೆ. ಮೊನ್ನೆ ನಮ್ಮ ಭಾರತೀಪುರದ ಗಾಂಧಿ ರಸ್ತೆಯಲ್ಲಿ (ಅದೂ ತಮ್ಮ ಹೆಸರೇ) ಐದು ಕೆ.ಜಿ. ಈರುಳ್ಳಿಯನ್ನು ಕೊಂಡು ಮನೆಗೆ ತರುತ್ತಿದ್ದ ವೃದ್ಧ ದಂಪತಿಗಳನ್ನು ಅಡ್ಡ ಹಾಕಿದ ಯಾರೋ ದುರಾತ್ಮರು, ಅವರನ್ನು ಹೊಡೆದು ಕೈ ಚೀಲವನ್ನು ಕಿತ್ತುಕೊಂಡು ಹೋದ ದುರ್ಘಟನೆ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತುಬಿಟ್ಟಿದೆ. ದೈನಂದಿನ ಪತ್ರಿಕೆಗಳಲ್ಲಿ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ/ಅತ್ಯಾಚಾರ/ಕೊಲೆ ಸುದ್ದಿಗಳಂತೂ ತಲೆತಗ್ಗಿಸುವ ವಿಚಾರವಾಗಿದೆ.

**'ಸತ್ಯ ಮೇವು ನ ಜಯತೆ' ಎಂದು ಎಚ್ಚರಿಕೆಯ ಸಂದೇಶ ಆಗಲೇ ಕೊಟ್ಟಿದ್ದರೆ...?**

ಮೊನ್ನೆ ಅಕ್ಟೋಬರ್ 2ರಂದು (ಅದೇ.... ತಮ್ಮ ಜನ್ಮ ದಿನದಂದು) ನನ್ನ ಕೊನೆಯ ತಮ್ಮ ಪತ್ರಿಕೆಯಲ್ಲಿದ್ದ ಒಂದು ಭಾವಚಿತ್ರದತ್ತ ಕೈಬೊಟ್ಟು ಮಾಡಿ ''ಅಮ್ಮ ಇವರು ಯಾರು?'' ಎಂದು ಕೇಳಿದ. ಅಮ್ಮ ಅಂಜುತ್ತಂಜುತ್ತಲೆ ''ಮಗು, ಇವರ ಹೆಸರು 'ಆಸಾರಾಮ್ ಬಾಪು' ಎಂದಳು. ಮತ್ತೆ ಇವರನ್ನು ಯಾಕೆ ಪೋಲೀಸರು ಬಂಧಿಸಿ ಠಾಣೆಗೆ ಕರೆದೊಯ್ಯುತ್ತಿದ್ದಾರೆ? ಇವರೂ ನಮ್ಮ 'ಬಾಪು'ವಿನಂತೆ ಸ್ವಾತಂತ್ರ್ಯ ಹೋರಾಟಗಾರರೆ?'' ಎಂದು ಮುಗ್ಧತೆಯಿಂದ ಪ್ರಶ್ನಿಸಿದ. ತಾತ, ದಯವಿಟ್ಟು ಬೇಜಾರು ಪಟ್ಟುಕೊಳ್ಳಬೇಡಿ. ಆಗ ಅಮ್ಮನ ಕಣ್ಣಂಚಿನಿಂದ

ಉದುರಿದ ಕಂಬನಿಗಳು, ಅದೇ ಪತ್ರಿಕೆಯಲ್ಲಿದ್ದ ನಿಮ್ಮ ಭಾವಚಿತ್ರದ ಮೇಲೆ ಬಿದ್ದಾಗ 'ಅಯ್ಯೋ ಈ ದೇಶದಲ್ಲಿ ಕಂಬನಿ ಒರೆಸುವ ಕೈಗಳೇ ಇಲ್ಲವಂತಾಯಿತೆ' ಎಂಬ ದುಃಖ ನನ್ನನ್ನು ಬಲವಾಗಿ ಕಾಡಿತು. ತಾತ, 'ಸಬರಮತಿ' ಆಶ್ರಮದಲ್ಲಿ ನೀವು ಗೋವುಗಳನ್ನು ದೇವರಂತೆ ಕಾಣಬೇಕು/ರಕ್ಷಿಸಬೇಕು ಎಂದು ಉಪದೇಶಿಸುತ್ತಿದ್ದಿರಿ. ಆದರೆ ಇಲ್ಲೇನಾಯಿತು? ಜಯಪ್ರಕಾಶ ನಾರಾಯಣರಂಥ ಸಜ್ಜನರು ಹುಟ್ಟಿದ ರಾಜ್ಯದಲ್ಲಿ, ಗೋವಿನ ಮೇವನ್ನೇ ಮೇಯ್ದು ಹಗರಣದಲ್ಲಿ ಸಿಲುಕಿದ ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು 'ಶಿಕ್ಷೆ' ಅನುಭವಿಸುವಂತಾಯ್ತು. ತಾತ, ಇಂದಿಗೂ ನಿಮ್ಮನ್ನು ನಾವು 'ಫಾದರ್ ಆಫ್ ದಿ ನೇಷನ್' ಎಂದು ಪೂಜಿಸುತ್ತೇವೆ. ಬಿಹಾರದ ಈ ಭ್ರಷ್ಟ ರಾಜಕಾರಣಿಯನ್ನು 'ಫಾದರ್ ಆಫ್ ದಿ ನೇಷನ್' ಎಂದು ಒಬ್ಬ ಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಕಾರ್ಟೂನು ಬಿಡಿಸಿದಾಗ, ನಮ್ಮ ಸಂಸ್ಕೃತಿಯ ಅವನತಿಯ ನೋವು ನಮಗೆಲ್ಲಾ ಕಾಣಿಸಿಕೊಂಡಿತು. ತಾತ, ಅಂದು ನೀವು ದೊಡ್ಡ ತಪ್ಪು ಮಾಡಿಬಿಟ್ಟಿರಿ. ತಾವು ಜೀವಂತವಿರುವವರೆಗೂ 'ಸತ್ಯಮೇವ ಜಯತೆ' ಎಂದು ಪ್ರತಿಪಾದಿಸುತ್ತಲೇ ಬಂದು ಬಿಟ್ಟಿರಿ. ಆದರೆ ಅಂದೇ ತಾವು ಎಚ್ಚೆತ್ತುಕೊಂಡು 'ಸತ್ಯ ಮೇವು ನ ಜಯತೆ' ಎಂದು ಎಚ್ಚರಿಕೆಯ ಸಂದೇಶ ಆಗಲೇ ಕೊಟ್ಟಿದ್ದರೆ, ಈ ದೇಶದಲ್ಲಿ ಭ್ರಷ್ಟಾಚಾರವೇ ಇರುತ್ತಿರಲಿಲ್ಲ, ಭ್ರಷ್ಟ ರಾಜಕಾರಣಿಗಳೇ ಹುಟ್ಟಿಕೊಳ್ಳುತ್ತಿರಲಿಲ್ಲ. ಎಂಥೆಥಹ ಸಾತ್ವಿಕರು ಈ ದೇಶದಲ್ಲಿ ಹುಟ್ಟಿ ಹೋದರು ತಾತ. ತಮ್ಮ ಸಮಕಾಲೀನರೇ ಆದ ಪೌನಾರ್ ಆಶ್ರಮದ ವಾಸಿ ವಿನೋಬಾಜಿಯವರು 'ಭೂ-ದಾನ'ದ ಚಳುವಳಿಯನ್ನೇ ಆರಂಭಿಸಿ ದೊಡ್ಡ ಕ್ರಾಂತಿಯನ್ನೇ ಮಾಡಿದರು. ಆದರೆ ಇದೇ ಮಾರ್ಗ ಅನುಸರಿಸ ಹೊರಟ ನಮ್ಮ ಹಲವು ರಾಜಕಾರಣಿಗಳು ಎಲ್ಲೋ ದಾರಿ ತಪ್ಪಿ, ಸರ್ಕಾರದ ಭೂಮಿಗಳನ್ನೆಲ್ಲಾ ಶ್ರೀಮಂತರಿಗೇ ಮರುದಾನ ಮಾಡಿ, ಎಡವಟ್ಟು ಮಾಡಿಕೊಂಡು ಜೈಲು ಪಾಲಾದರು.

ತಾತ, ಕಳೆದ ವಾರ ನಮ್ಮ ಶಾಲಾ ವಾರ್ಷಿಕೋತ್ಸವದ ದಿನ ನಾನು ಬದುಕಿ ಉಳಿದಿದ್ದೇ ಪವಾಡ ಸದೃಶವಾಯಿತು. ವಾಡಿಕೆಯಂತೆ, ನಾಡಗೀತೆ ಹಾಡಲು ನಾವೆಲ್ಲಾ ಎದ್ದು ನಿಂತಾಗ ಪ್ರಬಲವಾದ ನಾಡ ಬಾಂಬೊಂದು ಸ್ಫೋಟಿಸಿತು. ಈ ದೇಶದಲ್ಲಿ ಉಗ್ರಗಾಮಿಗಳಿಂದ, ಭ್ರಷ್ಟ ರಾಜಕಾರಣಿಗಳಿಂದ ನಮಗೆ ಬಿಡುಗಡೆಯೇ ಇಲ್ಲವೇ? ಈ ಸಮಸ್ಯೆಗಳಿಗೆ ಪರಿಹಾರ ಎಂತು? ಕೊನೆ ಎಂತು? ತಾತ, ನೀವು ಈ ದೇಶದಲ್ಲಿ ಮತ್ತೊಮ್ಮೆ ಯಾಕೆ ಹುಟ್ಟಿ ಬರಬಾರದು? ನೀವು ಸದಾ ನಮ್ಮ ಜತೆಗಿದ್ದರೆ ನಿಮ್ಮ ಜೊತೆ ಹೇ ರಾಮ್ ಅನ್ನುವ ಬದಲು ಹೇ ಆರಾಮ್ ಅನ್ನುವ ಪುಟ್ಟ ಬಯಕೆ ನಮ್ಮಂಥಹ ದಿಕ್ಕೆಟ್ಟ ಬಾಲಕರದು. ನಿಜ ಹೇಳಿ ತಾತ, ನಿಜವಾಗಿಯೂ ಆ ಗೋಡ್ಸೆ ನಿಮ್ಮನ್ನು ಕೊಂದನೇ? ಅಥವಾ ಈ ದೇಶದ ಸಂಸ್ಕೃತಿಯ ಅವನತಿಯ ಮುನ್ಸೂಚನೆ ನಿಮಗೆ ಮೊದಲೇ ಸಿಕ್ಕಿ ನೀವು ತೀರಾ ಜಿಗುಪ್ಸೆಗೊಂಡು, ನಿಮ್ಮ ಕೊಲೆಗೆ ನೀವೇ ಏನಾದರೂ ಸು....ಪಾ....ರಿ!

ಕೂಡಲೇ ಉತ್ತರಿಸಿ.

ಇಂತಿ ದಿಕ್ಕೆಟ್ಟ ಬಾಲಕ,
'ಸತ್ಯಮೂರ್ತಿ'

# ನಾನೂ ನನ್ನ ಸೆಲ್ ಫೋನೂ

**- ಸಹನಾ ಪ್ರಸಾದ್**

**ಹೇ,** ಎಲ್ಲಾ ನೋಡಿ, ನನ್ನ ಹೊಸಾ ಸೆಲ್ ಫೋನ್ ಮಾತಾಡುತ್ತಾ, ಅಲ್ಲಲ್ಲಿ ಕಿರುಚುತ್ತಾ ಬಂದವಳ ಕೈಯಿಂದ ಟಣ್ಣನೆ ಎಗರಿತು ಫೋನ್, ಸೀದಾ ಅಲ್ಲೇ ಇಟ್ಟಿದ್ದ ಸಾಂಬಾರ್ ಕಪ್ ಒಳಗೆ ಮುದ್ದಾಗಿ ಹೋಗಿ ಕೂತಿತು. ಅಯ್ಯೋ ದೇವರೇ, ಇದೇನಾಯಿತು, ನೆನ್ನೆ ತಾನೆ ಕೊಂಡ ಹೊಸ ಫೋನ್. ಪೇಚಾಡುತ್ತಾ ಸಾಂಬಾರ್‌ನಲ್ಲಿ ಕೈ ಇಡಲು ಹೋದವಳಿಗೆ ಶಾಕ್. ಬಿಸಿ ಬಿಸಿ ಸಾಂಬಾರ್. ಕಿರುಚಿದ ಸದ್ದಿಗೆ ಇಡೀ ಹೋಟೆಲ್ ಸ್ತಬ್ದವಾಯಿತು. ಗೆಳತಿಯ ದೂರು ನೋಟ ಲೆಕ್ಕಿಸದೆ (ಅದು ಅವಳ ಪ್ಲೇಟ್ ಹಾಗೂ ಕಪ್) ಸ್ಪೂನ್ ಅದ್ದಿ ಮೊಬೈಲ್ ಹೊರ ತೆಗೆದೆ. ಎಲ್ಲಾ ಒದ್ದೆ ಅಂಟು. ಹಿಂದಿನ ಕವರ್ ಬಿಚ್ಚಿ ಬ್ಯಾಟರಿ ತೆಗೆದು ಆಚೆ ಇಟ್ಟೆ. ಎಲ್ಲಾ ಕಡೆ ಸಾಂಬಾರನ ಮಸಾಲ ಸೇರಿಕೊಂಡಿತ್ತು. ಟಿಷ್ಯೂ ಮೇಲೆ ಹಾಕಿ ಟಿಷ್ಯೂ ಖರ್ಚಾದ ಮೇಲೆ ಸ್ವಲ್ಪ ಅಂಟು ಹೋಯಿತು. ಅಷ್ಟರಲ್ಲಿಯೇ ಅಲ್ಲಿ ನೆರೆದ ಗೆಳತಿಯರ ನಗು ತಾರಕಕ್ಕೇರಿತ್ತು. ಪಾಪ, ನೀರಲ್ಲಿ ನೆನೆದು, ಮಜ್ಜಿಗೆ ಪಾತ್ರೆಯಲ್ಲಿ ಹೊರಳಾಡಿ, ಸ್ಕೂಟರ್ ಡಿಕ್ಕಿಯಲ್ಲಿ ನುಜ್ಜುಗುಜ್ಜಾಗಿ, ದಿನಕ್ಕೆ ಲೆಕ್ಕವಿಲ್ಲದಷ್ಟು ಬಾರಿ ಬಿದ್ದು, ವಾಹನಗಳಡಿಗೆ ಸಿಕ್ಕಿ ನನ್ನ ಹಳೆ ಸೆಲ್ ಪ್ರಾಣ ಬಿಟ್ಟಿತು. ಈಗ ಈ ಹೊಸದರ ಸರದಿ, ಅವರ ಮಾತುಗಳನ್ನು ಕೇಳಿ ನಾನೂ ನಕ್ಕಿದೆ. (ಇನ್ನೇನು ಮಾಡಲಿ - ಎಲ್ಲರೊಂದಿಗೆ ಸೇರಿ ನಕ್ಕು ಬಿಡುವುದು ವಾಸಿ!)

**ಈ ರೀತಿ ಸಾಮಾನು ಹಾಳುಮಾಡುವುದು ನಾರ್ಮಲ್ ಅಲ್ಲ ಅಲ್ಲವೆ?**

ಇಷ್ಟೊತ್ತಿಗೆ ನಿಮಗೆಲ್ಲ ಗೊತ್ತಾಗಿರಬೇಕು. ಇದೇ ನನ್ನ ಸೆಲ್ ಅರ್ಥಾತ್ ಮೊಬೈಲ್ ಅರ್ಥಾತ್ ನನ್ನ ಅರ್ಧ ಪ್ರಾಣದ ಕಥೆ. ಅರ್ಧ ಪ್ರಾಣವೇಕೆಂದಿರಾ? ಏಕೆಂದರೆ ಇನ್ನೂ ಮಿಕ್ಕರ್ಧ ಮನೆಯವರಿಗೆ ಮೀಸಲು. ನಾನು ಕೊಡುವ ಕಷ್ಟಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡಿರುವ ಅವರಿಗೆ ಅಷ್ಟು ಮಾತ್ರವೂ ಬೇಡವೇ? ಹಾ, ಈಗೊಂದು ವಿಷಯವನ್ನು ನಿಮಗೆ ಹೇಳಲೇಬೇಕು. ಮೊನ್ನೆ ಗೆಳತಿಯೊಬ್ಬಳು ಕರೆ ಮಾಡಿ ಚೆನ್ನಾಗಿ ಬಯ್ದಳು. ಯಾವಾಗಲೂ ನಿನ್ನ ಕೆಲಸದಲ್ಲಿ ಬ್ಯುಸಿ, ಬ್ಯುಸಿ. ಅದನ್ನು ಬಿಟ್ಟು ಬೇರೆ ಪ್ರಪಂಚದ ಅರಿವಿದೆಯ ನಿನಗೆ? ಮೊನ್ನೆ ಎಲ್ಲಾ ಎಷ್ಟು ಬೇಜಾರಾಗಿತ್ತು. ಹೇಳಿಕೊಳ್ಳಬೇಕೆಂದರೆ ನೀನು ಸಿಗೋಲ್ಲ. ಛೇ, ಗೆಳತಿಗೊಂದಷ್ಟೂ ಸಮಯ ಕೊಡದ ನಿನಗೆ ಏನನ್ನಬೇಕೋ ಗೊತ್ತಿಲ್ಲ. ಆ ದಿನವೆಲ್ಲ ಯೋಚನೆಯಲ್ಲಿ ಕಳೆದೆ. ಅಯ್ಯೋ, ಹೌದಲ್ಲವೇ, ಗಂಡನಿಗೂ ನನ್ನ ಮೇಲೆ ಇದೇ ಭಾವನೆಯೇ? ಏಕೆಂದರೆ ಯಾವಾಗಲೂ ನನ್ನದೇ ವಟವಟ. ಅದು ಏನ್ ಗೊತ್ತಾ? ಎಂದು ಶುರುವಾಗುವ ಮಾತು, ಅದು ದಾಟಿ, ಎಲ್ಲೋ ತಲುಪಿ, ಅಲ್ಲಿಂದ ನೆಗೆದು, ಬೇರೆಲ್ಲೋ ಸಿಕ್ಕಿ... ಅಬ್ಬಬ್ಬಾ, ಸಾಕಪ್ಪ ಸಾಕು ಎನ್ನುವಲ್ಲಿಗೆ ಮುಟ್ಟಿದರೂ ಬಹಳ ಶಾಂತತೆಯಿಂದ ಕೇಳುವ ಗಂಡನ ಮಾತು ನಾನ್ಯಾವಾಗಲಾದರೂ ಕೇಳಿರುವೆನಾ? ಅತ್ಯಂತ ಪ್ರೀತಿಯಿಂದ ಕೇಳಿದೆ ''ನಾನು ನಿಮಗೆ ಸಮಯ ಕೊಡುತ್ತಿಲ್ಲ ಎಂದು ನಿಮಗನಿಸುತ್ತದೆಯೇ?'' ಅಷ್ಟೇ

ಪ್ರೀತಿಯಿಂದ (?) ಉತ್ತರ ಬಂತು. ''ಅಯ್ಯೋ ಸಧ್ಯ, ನಿನ್ನ ಎಲ್ಲಾ ಕೆಲಸಗಳನ್ನು ಮುಗಿಸಿಕೊ, ಆಮೇಲೆ ನಿಮ್ಮ ಬಳಿ ಕೂತು ನನ್ನ ಕೆಲಸವೆಲ್ಲಾ ನಿಂತು ಹೋಯಿತು ಅನ್ನಬೇಡ!''

ಈಗ ನನ್ನ ಸೆಲ್ ಪುರಾಣಕ್ಕೆ ಮರಳಿ ಬರೋಣ. ಆಂಗ್ಲಭಾಷೆಯಲ್ಲಿ ನನ್ನಂತಹವರಿಗೆ ಬಟ್ಟರ್ ಫಿಂಗರ್ ಎನ್ನುತ್ತಾರೆ. ಏನು ಹಿಡಿದುಕೊಂಡರೂ ಬೀಳಿಸುತ್ತೇನೆ. ಅದರಲ್ಲೂ ಸೆಲ್ ಫೋನ್. ಮಾತಾಡುವಾಗ ಪರಿಚಯದವರು ಕಂಡಾಗ ಹೈ ಎಂದು ಕೈಯನ್ನು ಜೋರಾಗಿ ಆಡಿಸಿದಾಗ, ಕೈಯಲ್ಲಿದ್ದ ಮೊಬೈಲ್ ಫೋನ್ ರಾಕೆಟ್ಟಿನಂತೆ ಅವರ ಬಳಿ ಧಾವಿಸಿದ್ದೂ ಉಂಟು. ಎಷ್ಟೋ ಸಲ ಮಾತನಾಡುವ ಉತ್ಸಾಹದಲ್ಲಿ ಮೊಬೈಲನ್ನೇ ಮೈಕ್ ರೀತಿಯಲ್ಲಿ ಬಳಸಿ, ಅದೇ ಉತ್ಸಾಹದಲ್ಲಿ ತಿರುಗಿಸಿದಾಗ ಆದು ಥಂಗನೆ ನೆಗೆದು, ನೆಲದ ಮೇಲೆ ಬಿದ್ದು 2-3 ಚೂರಾದದ್ದೂ ಉಂಟು. ಆದರೂ ಮತ್ತೆ ಕೆಲಸ ಮಾಡಿವೆ ಈ ಫೋನುಗಳು. ಒಮ್ಮೆ ಬನ್ನೇರುಘಟ್ಟ ರಸ್ತೆಯಲ್ಲಿ ಜಾಕೆಟ್ ಜೋಬಿನಿಂದ ಬಿದ್ದು, 3 ಭಾಗ-ಬ್ಯಾಟರಿ, ಮುಂಭಾಗದ ಪ್ಯಾನಲ್, ಹಿಂಭಾಗದ ಪ್ಯಾನಲ್ ಎಲ್ಲಾ ಒಂದೊಂದು ಕಡೆ ಬಿದ್ದು, ಅದರ ಮೇಲೆ ಸುಮಾರು ಗಾಡಿಗಳು ಹೋದವು. ನನ್ನ ಅದೃಷ್ಟ ಯಾವುದೂ ಚಕ್ರದ ಅಡಿ ಸಿಗಲಿಲ್ಲ, ಭರ್ಜರಿ ಟ್ರಾಫಿಕಲ್ಲಿ ಪೆಚ್ ಪೆಚ್ಚಾಗಿ ನಿಂತು ವಾಹನಗಳ ಸಂಚಾರ ಕಡಿಮೆಯಾಗುವುದನ್ನೇ ಕಾಯುತ್ತಿದ್ದೆ. ಎಲ್ಲ ಭಾಗಗಳನ್ನು ಹುಡುಕಿ, ಮತ್ತೆ ಜೋಡಿಸಿದಾಗ ಅಚ್ಚರಿ! ಮೊಬೈಲ್ ಒಂದೆ ಏಕೆ, ಕ್ಯಾಮೆರಾ ಕೂಡ ಕೆಲಸ ಮಾಡುತ್ತಿತ್ತು. ಆದರೆ ಹಿಂಭಾಗ, ಮುಂಭಾಗ ಎಲ್ಲ ಜಜ್ಜಿದ ಗುರುತುಗಳು. ಸ್ನೇಹಿತರ ಬಳಿ ಹೇಳಿಕೊಳ್ಳಲು ಒಳ್ಳೆ ವಿಷಯವಾಯ್ತು. ಮನೆಯಲ್ಲಿ ಅದರ ಸ್ವರೂಪ ಕಂಡು ಯಜಮಾನರ ಅಚ್ಚರಿ ''ಎಲ್ಲಿ ಬೀಳಿಸಿಕೊಂಡೆ? ಬೇಡ ಬೇಡ ಅಂದರೂ ರಸ್ತೆಯಲ್ಲಿ ಹಾಡು ಕೇಳಿಸಿಕೊಂಡು ಬರುತ್ತಾ ಇದ್ಯಾ? ಇದೂ ರಸ್ತೆಯಲ್ಲೇ ಆಗಿರುವುದು. ನೋಡು ಎಷ್ಟು ನುಜ್ಜು ಗುಜ್ಜಾಗಿದೆ.'' ಅಮಾಯಕಳಂತೆ ನಟಿಸಿದೆ. ''ಅಯ್ಯೋ, ಇಲ್ಲವಲ್ಲ, ಈಗ ಸುಮಾರು ದಿನಗಳಿಂದ ಬೀಳಿಸಿಕೊಳ್ತಾನೆ ಇದೀನಿ.'' ಅಯ್ಯೋ ನಿನ್ನ ಸುಳ್ಳು ನನಗೆ ಗೊತ್ತಾಗೋಲ್ವೆ ಎಂಬ ಮುಖಭಾವದಿಂದ ಹೇಳಿದರು ಸಧ್ಯ. ಟಚ್ ಸ್ಕ್ರೀನ್ ಇಲ್ವಲ್ಲಾ, ಇದ್ದಿದ್ರೆ ಎಷ್ಟು ಸಲ ರಿಪೇರಿಗೆ ಬಂದಿರುತ್ತಿತ್ತೋ.

ಮಗನೊಂದಿಗೆ ಮಾತಾಡುತ್ತಾ ಕೈ ಆಡಿಸಿದಾಗ ಮಜ್ಜಿಗೆ ಪಾತ್ರೆಯೊಳಗೆ ಡುಂಕಿ ಹಾಕಿತು ಸೆಲ್ ಫೋನ್! ಮಜ್ಜಿಗೆಯಲ್ಲಿದ್ದ ಕೊತ್ತಂಬರಿ ಸೊಪ್ಪು, ಶುಂಠಿ, ಉಪ್ಪು ಎಲ್ಲ ಮೊಬೈಲ್ ಪ್ರವೇಶ! ಎಲ್ಲ ಭಾಗಗಳನ್ನು ತೆಗೆದು, ಒಣಗಿಸಿ ಇಡೀ ಪಾತ್ರೆಯಲ್ಲಿದ್ದ ಮಜ್ಜಿಗೆಯನ್ನು ಬಚ್ಚಲಿಗೆ ಸುರಿದಾಯ್ತು. ಒದ್ದೆ ಮೊಬೈಲನ್ನು ಚಾರ್ಜ್ ಮಾಡಬಾರದೆಂದು ಗೊತ್ತಿರಲಿಲ್ಲ, ಆಫ್ ಮಾಡಿ ಆನ್ ಮಾಡಿದ ತಕ್ಷಣ ಏನೂ ಬರಲಿಲ್ಲ, ಬೆಳಕು ಬೀರುತ್ತ ನಕ್ಕಿತು ಆದರೆ ನೆಟ್‌ವರ್ಕ್ ಚಿಹ್ನೆ ಇಲ್ಲ, ಅಂಗಡಿಗೆ ತೆಗೆದುಕೊಂಡು ಹೋದರೆ ನಿಮ್ಮ ಸಿಮ್ ಹಾಳಾಗಿದೆ ಎಂದರು. ಬೇರೆ ಸಿಮ್ ತೆಗೆದುಕೊಂಡಾಯ್ತು, ಅದರಲ್ಲಿ ಇದ್ದ ನಂಬರ್‌ಗಳೆಲ್ಲಾ ಗಾಯಬ್. ಯಾರು ಫೋನ್ ಮಾಡಿದರೂ, ಮೆಸ್ಸೇಜ್ ಕಳುಹಿಸಿದರೂ, ಯಾರಿದು? ಎಂದು ಕೇಳಿ ಬೈಸಿಕೊಂಡಾಯ್ತು. ಅದಾದ ಸ್ವಲ್ಪ ದಿನದಲ್ಲೇ ಮೊಬೈಲನ್ನು ಪ್ಯಾಂಟ್ ಜೋಬಲಿಟ್ಟು ಮರೆತು, ವಾಷಿಂಗ್ ಮೆಶೀನಿಗೆ ಹಾಕಿ ಆನ್ ಮಾಡಿಯಾಯ್ತು. ಗರ ಗರ ಸದ್ದು, ಏನೇನೋ ಆವಾಜುಗಳು. ಆಫ್

ಮಾಡುವ ಮುನ್ನವೇ ಮೆಶೀನು ನಿಂತುಹೋಯಿತು. ಬಾಗಿಲು ತೆಗೆದಾಗ ಕಾಣಿಸಿದ ದೃಶ್ಯ ವರ್ಣಿಸುವುದು ಬೇಡ. ಸೆಲ್ ಫೋನ್ ಜತೆ ಮೆಶೀನಿನ ರಿಪೇರಿಗೆ ಸಾಕಷ್ಟು ಹಣ ಖರ್ಚಾಯಿತು. ಸುಮಾರು ಪುಕ್ಕಟ್ಟೆ ಸಲಹೆಗಳು ಸಿಕ್ಕವು. ಒಮ್ಮೆ ನೀಮ್ಹಾನ್ಸ್‌ಗೆ ಹೋಗಿ ಪರೀಕ್ಷೆ ಮಾಡಿಸಿಕೊಳ್ಳುವುದು ವಾಸಿ. ಈ ರೀತಿ ಸಾಮಾನು ಹಾಳು ಮಾಡುವುದು ನಾರ್ಮಲ್ ಅಲ್ಲ. ಈ ಫೋನ್ ನೋಡಿದರೆ ನಿಮಗೇನಾದರೂ ಭಯವಾಗುತ್ತದೆಯೇ? ಅಂದರೆ ಯಾರೋ ಈ ಫೋನ್ ಮೂಲಕ ನಿಮಗೇನಾದರೂ ಧಮಕೀ ನೀಡುತ್ತಿದ್ದಾರೆಯೇ? ಅದು ನಿಮ್ಮ ಒಳ ಮನಸ್ಸಿನಲ್ಲಿ ತಳಮಳ ಉಂಟು ಮಾಡುತ್ತಿರಬಹುದು ಹೀಗೆ ಏನೇನೋ.

ಮೊನ್ನೆ ಸ್ಕೂಟರಿನ ಡಿಕ್ಕಿಯಲ್ಲಿಟ್ಟು ಸರಿಯಾಗಿ ನೋಡದೆ ಧಡ್ ಎಂದು ಡಿಕ್ಕಿ ಹಾಕಿದಾಗ ಅದು ಚೂರು ಚೂರಾಯಿತು. ಅಲ್ಲೇ ಇದ್ದ ನನ್ನ ಗೆಳತಿಯ ತಮ್ಮನೊಬ್ಬ ಅದರ ಫೋಟೋ ತೆಗೆದು ಎಲ್ಲರಿಗೂ ವ್ಹಾಟ್ಸ್ ಆಫ್ ಮಾಡಿದ. ಅದು ಫೇಸ್‌ಬುಕ್, ಟ್ವಿಟ್ಟರ್ ಎಲ್ಲಾ ಕಡೆ ಭಾರೀ ಯಶಸ್ವೀ ಪ್ರಚಾರ ಕಂಡಿತು. ಆದರೆ ಮೊಬೈಲ್ ಅಂಗಡಿಯಾತ, ಅವ ಹಿಂದೆ ನನ್ನ ವಿದ್ಯಾರ್ಥಿಯಾದವ, ಖುಷಿಯಿಂದ ನಗುತ್ತಿದ್ದ. ನನ್ನಂಥವರಿದ್ದರೆ ಅವನ ಅಂಗಡಿ ವ್ಯಾಪಾರ ಉದ್ಧಾರವಾಗುವುದು, ಅಲ್ಲವೇ? ಇವೆಲ್ಲ ಆದ ಮೇಲೆ ನಾನು ಬದಲಾದೆ. ಇಲ್ಲ, ಬೀಳಿಸುವುದು ಕಡಿಮೆ ಆಗಲಿಲ್ಲ. ಆದರೆ ಜನರಿಗೆ ಹೇಳುವುದನ್ನು ಬಿಟ್ಟೆ!

✸

---

## ಸುಮ್ನೆ ನಕ್ಕಬಿಡಿ

- ವರ್ಣ ಬೇಧ ನೀತಿ ಚೆಸ್ ಆಟದಲ್ಲೂ ಇದೆ – ಏಕೆಂದರೆ ಆಟದಲ್ಲಿ ಮೊದಲು ಚಲಿಸಬೇಕಾದದ್ದು ಬಿಳಿಯದನ್ನೇ.
- ನಾಯಿ ಬಿಸ್ಕತ್ತು ಈಗ ಅತ್ಯಧಿಕ ರುಚಿಯ ಜೊತೆಗೆ ಎನ್ನುವ ಜಾಹೀರಾತು ಬಂದರೆ, ಆ ಅತ್ಯಧಿಕ ರುಚಿಯನ್ನು ನೋಡಿದ್ದು ಯಾರು?
- ಯಾವುದೇ ವಿಮಾನಾಪಘಾತದಲ್ಲಿ ಬ್ಲಾಕ್ ಬಾಕ್ಸ್‌ಗೆ ಏನೂ ಹಾನಿಯಾಗುವುದೇ ಇಲ್ಲವಂತೆ. ಹಾಗಾದರೆ, ಇಡೀ ವಿಮಾನವನ್ನು ಅದೇ ಪದಾರ್ಥದಿಂದ ಯಾಕೆ ತಯಾರಿಸಬಾರದು.
- ಯಾರಾದರೂ ನೀನು ನಾಯಿ ತರ ಕೂತು ಕೆಲಸ ಮಾಡ್ತಿದೀಯ ಅಂದರೆ, ನಾಯಿಗಳು ಯಾವಾಗ ಒಂದೇ ಕಡೆ ಕೂತಿರುತ್ತವೆ ಎಂತ ಕೇಳಬಹುದಲ್ಲವೇ.
- ಕ್ರೀಡಾ ಮೈದಾನದಲ್ಲಿ ಜನರು ಕುಳಿತುಕೊಳ್ಳುವ ಸ್ಥಳಕ್ಕೆ ಸ್ಟಾಂಡ್ ಅಂತ ಯಾಕೆ ಹೇಳ್ತಾರೆ?
- ಎಲ್ಲರೂ ಸ್ವರ್ಗಕ್ಕೆ ಹೋಗಬೇಕು ಎಂದು ಬಯಸುವವರೇ, ಆದರೆ ಯಾರೂ ಸಾಯಲು ಸಿದ್ಧರಿಲ್ಲ.

*– ಸುಕೇಶವ*

**ವರ್ಷಾಂತ್ಯದ ವಿಶೇಷ**

# ಈ ವರ್ಷ ಹಿಂಗಾತ? ಮುಂದಿನ ವರ್ಷ ಹೆಂಗೈತ?

**- ಪ್ರಶಾಂತ ಅಡೂರ**

ಇದು ಹೋದ ವರ್ಷ ಡಿಸೆಂಬರದ ಮಾತ ಇರಬೇಕು. ಹಿಂಗ ಮನ್ಯಾಗ ಹರಟಿ ಹೊಡ್ಕೋತ ಕೂತಾಗ, ನಮ್ಮವ್ವ ಒಮ್ಮಿಂದೊಮ್ಮಿಲೇ ''ಎಷ್ಟ ಲಗೂ ವರ್ಷ ಕಳಿತಪಾ ಪ್ರಶಾಂತಾ... ದಿವಸ ಹೋಗಿದ್ದ ಗೊತ್ತಾಗಂಗಿಲ್ಲಾ ನೋಡ, ಹೋದ ವರ್ಷರ ನನಗ 64 ತುಂಬಿದ್ವು ಈಗಾಗಲೇ 65 ತುಂಬಿ ಬಿಟ್ಟವು, ಹಿಂಗ ಫಾಸ್ಟ್ ದಿವಸ ಹೊಂಟರ ಇನ್ನ ಎಷ್ಟ ದಿವಸೋ ಏನೋ ನಂದು'' ಅಂತ ಅಂದ್ಲು. ಅದಕ್ಕೆ ನನ್ನ ಹೆಂಡತಿ ಸುಮ್ಮನ ಕೂಡಬೇಕೊ ಬ್ಯಾಡೊ ''ಅಯ್ಯಾ.... ಅತ್ತ್ಯಾ, ಲಾಸ್ಟ್ ಮೂರ ವರ್ಷದಿಂದ ಹಿಂಗ ಅಂದ ಅಂದ ನಿಮ್ಮ ಆಯುಷ್ಯ ಜಾಸ್ತಿ ಮಾಡ್ಕೋಳಿಕತ್ತೀರಿ ತೊಗೊಳ್ರಿ'' ಅಂದ ಬಿಟ್ಲು, ತೊಗೊ ಒಂದ ರೌಂಡ ಇಬ್ಬರದು ಜಟಾ-ಪಟಿ ಶುರು ಆತ, ನಾ ಸಿರಿಯಸ್ ಆಗಿ ನಡಕ ಬಾಯಿ ಹಾಕಿ ''ನನಗ ನಿಮ್ಮಿಬ್ಬರಿಗೂ ಬರಬರತ ವಯಸ್ಸ ಹೋಗ್ತೋದೊ ಇಲ್ಲಾ ಬರ್ತದೊ ಗೊತ್ತಿಲ್ಲಾ ಆದರೆ ನೀವಿಬ್ಬರು ಹಿಂಗ ಜಗಳಾಡಿದರ ನನ್ನ ವಯಸ್ಸಂತೂ ಕಡಿಮೆ ಆಗೋದ ಗ್ಯಾರಂಟಿ. ಮುಂದಿನ ವರ್ಷದಿಂದ ನೀವಿಬ್ಬರು ಒಟ್ಟ ಜಗಳಾಡಂಗಿಲ್ಲಾ ಅಂತ ರೆಸ್ಯುಲೇಶನ್ ಮಾಡ್ರಿ'' ಅಂದೆ.

> **ಆಗಲಾರದ್ದ ರೆಸ್ಯುಲೇಶನ್ ಮಾಡಿ ಯಾಕ ಅದಕ್ಕ ಬೆನ್ನ ಹತ್ತಬೇಕು, ಸುಮ್ಮನ ಸಂತೋಷದಿಂದ ಹೆಂಡ್ತಿ ಹೇಳಿದಂಗ ಕೇಳ್ಕೊಂಡ ಬದಕೋದ ಛಲೋ....**

ನಮ್ಮವ್ವಗ ರೆಸ್ಯುಲೇಶನ್ ಅಂದರ ಒಮ್ಮಿಕ್ಕಲೇ ಗೊತ್ತಾಗಲಿಲ್ಲಾ. ಕಡಿಕೆ ರೆಸ್ಯುಲೇಶನ್ ಅಂದ್ರ ಆಣಿ ಅಂತ ಹೇಳಿದ ಮ್ಯಾಲೆ ''ಆತ ತೊಗೊ ನಿನ್ನ ಮ್ಯಾಲೆ ಆಣಿ ಮಾಡಿ ಹೇಳ್ತೇನಿ, ಮುಂದಿನ ವರ್ಷದಿಂದ ನಿನ್ನ ಹೆಂಡತಿ ಏನ ಹಾಳಗುಂಡಿ ಬಿದ್ದರು ನಾ ಅಕಿ ಉಸಾಬರಿ ಹೋಗಂಗಿಲ್ಲಾ'' ಅಂದ್ಲು, ಅಕಿ ಹಂಗ ಅಂದಿದ್ದ ನೋಡಿ ನನ್ನ ಹೆಂಡತಿ ತಾನು ಉಮೇದಿಲೇ ''ನಿಮ್ಮ ಆಣಿ ಮಾಡಿ ಹೇಳ್ತೇನಿ, ನಿಮ್ಮವ್ವಗ ಇನ್ನ ಮುಂದ ಇತತ್ತ ಸರಿ ಅಂದರ ಕೇಳ್ರಿ'' ಅಂದ್ಲು. ಅಲ್ಲಾ ಇಬ್ಬರು ನನ್ನ ಮ್ಯಾಲೆ ಆಣಿ ಮಾಡಿದರು, ಇನ್ನ ಮುಂದಿನ ವರ್ಷ ನನ್ನ ಗತಿ ಏನಪ್ಪಾ ಅಂತ ಚಿಂತ ಹತ್ತ.

ಆಮ್ಯಾಲೆ ನಾನು ನನ್ನ ಹೆಂಡತಿ ಒಂದಿಷ್ಟ ಹೊಸ ವರ್ಷದ್ದ ರೆಸ್ಯುಲೇಶನ್ ಮಾಡಿದರಾತು ಅಂತ ರೆಸ್ಯುಲೇಶನ್ ಪಟ್ಟಿ ಮಾಡಲಿಕ್ಕೆ ಹತ್ತಿದ್ವಿ.

''ನೀವು ಈ ವರ್ಷ ಫಾಲತು ವಾರಕ್ಕೊಮ್ಮೆ ........... ಅಂತ ರೊಕ್ಕ ಖರ್ಚ ಮಾಡೋದ ಬಂದ ಮಾಡಿ ಮನಿ ಕಟ್ಟಸಲಿಕ್ಕೆ ಶುರು ಮಾಡ್ರಿ. ವರ್ಷಾ ಒಂದ ಹತ್ತ ಸಾವಿರ ರೂಪಾಯಿ

ಮಂದಿ ಮನೆ ಒಪನಿಂಗಗೇ ಹೋಗಿ ಹೋಗಿ ಉಡಗೊರಿ ಕೊಡೊದ ಆತ ನಮ್ಮ ಹಣೇ ಬರಹದಾಗ'' ಅಂತ ನನ್ನ ಹೆಂಡತಿ ಶುರು ಮಾಡಿದ್ಲು. ಹಂಗ ಆಕಿ ಹೇಳೋದ ಖರೇನ ನನ್ನ ಕೈಯಾಗ ರೊಕ್ಕ ನಿಲ್ಲಂಗಿಲ್ಲಾ. ಹಿಂಗಾಗೆ ಇವತ್ತೀಗೂ ಒಂದ ಸ್ವಂತ ಮನೆ ಕಟ್ಟಸಲಿಕ್ಕೆ ಆಗಲಿಲ್ಲಾ.

ನಾ ಅಕಿಗೆ ''ಲೇ, ನೀ ಮೊದಲ ಈ ವರ್ಷನಿಂದ ವೇಟ್ ಒಂದ ಹತ್ತ ಕೆ.ಜಿ. ಇಳಸಬೇಕು, ಇಲ್ಲಾಂದರ ನಾಳೆ ನಾ ಮನಿ ಕಟ್ಟಿದರ ನಾಂದಿ ಇಟ್ಟಗೊಳಿಕ್ಕೆ ನೀ ಇರಲಾರದಂಗ ಆಗಿ ಗಿಗಿತ್ತ'' ಅಂತ ಅಂದೆ. ಅದಕ್ಕೆ ಅಕಿ ''ನಾ ಈ ವರ್ಷ ಜಿಮಗೆ ಹೋಗ್ತೇನಿ'' ಅಂತ ರೆಸ್ಯುಲೇಶನ್ ಮಾಡಿದ್ಲು. ನಂಗ ತಲಿ ಕೆಡ್ತ ಇಕಿ ನಾ ಇಲ್ಲೆ ರೊಕ್ಕ ಉಳಿಸಿ ಮನಿ ಕಟ್ಟಸಬೇಕು ಅಂತ ವಿಚಾರ ಮಾಡಲಿಕತ್ತರ ಇಕಿ ರೊಕ್ಕ ಖರ್ಚ ಮಾಡೊದರ ಬಗ್ಗೆ ವಿಚಾರ ಮಾಡಲಿ ಕತ್ತಾಳಲಾ ಅಂತ ''ಈ ವರ್ಷದಿಂದ ಮನಿಕೆಲಸಾ ಮಾಡೋಕಿನ್ನ ಬಿಡಸಿ, ಭಾಂಡೆ, ಒಗ್ಯೋಣಾ ಎಲ್ಲಾ ನೀನ ಮಾಡ್ಕೋ'' ಅಂತ ಅಂದೆ. ಆಕಿ ಮುಂದ ''ಈ ವರ್ಷದಿಂದ ಮಕ್ಕಳಿಗೆ ಟ್ಯುಶನ್ ಬಿಡಿಸಿ ಬಿಡೋಣ, ನೀವು ಹೊರಗಿಂದ ಊರ ಉಸಾಬರಿ ಮಾಡೋದ ಬಿಟ್ಟು ಮಕ್ಕಳ ಅಭ್ಯಾಸ ಕಡೆ ಸ್ವಲ್ಪ ಲಕ್ಷ ಕೊಡರಿ'' ಅಂತ ರೊಕ್ಕಾ ಉಳಸೊ ಮಾತ ಹೇಳಿದ್ಲು. ನಾನ ಇಕಿ ನನಗೆ ಬೆನ್ನ ಹತ್ಯಾಳಲಾ ಅಂತ ''ಇನ್ನ್ ಮ್ಯಾಲೆ ಮಗಳಿಗೆ ಆಟೋ ಬಿಡಿಸಿ, ನೀನ ಮಗಳನ ದಿವಸಾ ಸಾಲಿಯಿಂದ ಕಳಸೋದ ಕರಕೊಂಡ ಬರೋದು ಮಾಡ'' ಅಂತ ವಾಪಸ ಅಕಿ ಮ್ಯಾಲೆ ಬಂದೆ. ಹಂಗ ಇಕಿ ಮನಿ ಕೆಲಸಾ ಎಲ್ಲಾ ತಾನ ಮಾಡಿ ಮಗಳನ ಸಾಲಿಗೆ ಕರಕೊಂಡ ಬರೋದು ಬಿಡೋದು ಮಾಡಿದ್ಲಂದರ ಜಿಮಗೆ ಯಾಕ ಹೋಗಬೇಕ, ತನ್ನ ತಾನ ಮೈ ಕರಗತದ, ಮ್ಯಾಲೆ ನನ್ನ ರೊಕ್ಕನೂ ಉಳಿತಾವ ಅನ್ಕೊಂಡ 2013ಕ್ಕ ವೆಲ್‌ಕಮ್ ಮಾಡಿದೆ.

ಆ ಮಾತಿಗೆ ಈಗ ಒಂದ ವರ್ಷ ಆಗಲಿಕ್ಕೆ ಬಂತ, ನನ್ನ ಹೆಂಡತಿದೇನ ಒಂದ ಗುಂಜಿನೂ ವೇಟ ಇಳದಿಲ್ಲಾ. ನಾ ಏನ ಇನ್ನು ಮನಿದ ಭೂಮಿ ಪೂಜಾ ಮಾಡಲಿಲ್ಲಾ. ಹಿಂಗಾಗಿ ಆ ಹೋದ ವರ್ಷದ ಲಿಸ್ಟ ಬರೇ ಡೇಟ ಚೇಂಜ ಮಾಡಿ ರೆಸ್ಯುಲೇಶನ್ಸ ಹಂಗ ಕಂಟಿನ್ಯು ಮಾಡಬೇಕಂತ ಮಾಡೇನಿ.

ಅಲ್ಲಾ, ಇರಲಿ ಹಂಗ ನಮಗೆ ಒಂದ ವರ್ಷ ಹೆಂಗ ಹೋತು ಅಂತ ಗೊತ್ತಾಗಲಿಲ್ಲಾ ಅಂದರ ನಾವು ಖುಷಿಲೇನ ಕಳದೇವಿ ಅಂತ ಅರ್ಥ. ಹಂಗಿದ್ದಮ್ಯಾಲೆ ಯಾಕ ಸುಳ್ಳ ಆಗಲಾರದ್ದ ರೆಸ್ಯುಲೇಶನ್ ಮಾಡಿ ಅದಕ್ಕ ಬೆನ್ನ ಹತ್ತಬೇಕು, ಸುಮ್ಮನ ಸಂತೋಷದಿಂದ ಹೆಂಡ್ತಿ ಹೇಳಿದಂಗ ಕೇಳ್ಕೊಂಡ ಬದಕೋದ ಛಲೋ....

ಅನ್ನಂಗ ನಮ್ಮವ್ವ ನನ್ನ ಹೆಂಡತಿ ಮಾಡಿದ್ದ ರೆಸ್ಯುಲೇಶನ್ ಒಂದ ಪೂರ್ತಿ ಆದಂಗ ಅನಸ್ತದ. ಅವರಿಬ್ಬರೂ ಸೇರಿ ಏನ ನನ್ನ ಮ್ಯಾಲೆ ಆಣಿ ಮಾಡಿ ಇನ್ನ ಒಟ್ಟ ಇಬ್ಬರೂ ಜಗಳಾಡಂಗಿಲ್ಲಾ ಅಂತ ಅಂದಿದ್ದರಲಾ ಅದು.... ಅಲ್ಲಾ ಹಂಗ ಅವರ ಜಗಳಾಡೋದ ಬಿಟ್ಟಾರೊ ಇಲ್ಲೊ ನಂಗಿನ್ನೂ ಗ್ಯಾರಂಟಿ ಇಲ್ಲಾ ಆದರ ನಾ ಮಾತ್ರ ಇನ್ನು ಇದ್ದೇನಲಾ ಅದಕ್ಕೆ ಅವರ ಜಗಳಾಡೋದ ಬಿಟ್ಟಿರಬೇಕು ಅಂತ ಅನ್ಕೊಂಡೇನಿ....

ಹಂಗ ಹೊಸ ವರ್ಷಕ್ಕೆ ರೆಸ್ಯುಲೇಶನ್ ಅಂತು ಮಾಡರಿ, ಅದನ್ನ ಪಾಲಸೋದು ಬಿಡೋದು ಮುಂದಿನ ಮಾತ.

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**– ದಂನಳ**

- ಅಕ್ಷರ ಭಾಗ್ಯ, ಅನ್ನದ ಭಾಗ್ಯ, ತಾಳಿ ಭಾಗ್ಯ, ಕ್ಷೀರ ಭಾಗ್ಯ... ಕನ್ನಡಿಗರ ಭಾಗ್ಯದ ಬಾಗಿಲೇ ತೆರೆದಿದೆ ಈಗ.
- ಬಾಯಿ ಮುಚ್ಚಿಕೊಂಡಿರುವ ಸದಾವಕಾಶ ಸಿಕ್ಕಾಗ ಅದನ್ನು ಬಳಸಿಕೊಳ್ಳದೇ ಇರದಿರಿ.
- ಛಂದಗೆ ಕಾಣೋಕೆ ಎಷ್ಟೆಲ್ಲಾ ಬಣ್ಣ ಮೆತ್ಕೊಳ್ತಾರೆ. ಛಲೋ ಇರೋಕೆ ಕಲೀಬೇಕು. ಆಗ ಎಲ್ಲರಿಗೂ ಛಂದ ಕಾಣ್ತಾರೆ.
- ಎಲ್ಲ ದುರ್ಘಟನೆಗಳಿಗೂ ಸ್ಪಷ್ಟ ಕಾರಣಗಳಿರಲೇಬೇಕೆ? ವಿಧಿನಿಯಮ, ಕರ್ಮ, ಹಣೆಬರಹ ಈ ಪದಗಳಿರುವುದಾದರೂ ಏತಕ್ಕೆ?
- ರಾಹುಲ್ ಗಾಂಧಿಗೆ ಯಾರೂ ಅಡ್ಡ ಇಲ್ಲ. ಏಕೆಂದರೆ ಆ ಪಕ್ಷದಲ್ಲಿ ಎಲ್ಲರೂ ಅಡ್ಡ ಬೀಳೋರೇ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ರಾಕ್ ಸ್ಟಾರ್ ಎಂದರೆ ಕಲ್ಲು ಗುಡ್ಡ ಹತ್ತುವವನು ಎಂದರ್ಥವೇ?
- ಒಳ್ಳೆ ಕಂಪನಿಗಳನ್ನು ಯಾರೂ ಬಿಡುವುದಿಲ್ಲ, ಕೆಟ್ಟ ಬಾಸ್‌ನಿಂದ ಬಿಡುಗಡೆ ಹೊಂದುತ್ತಾರೆ.
- ಸ್ನೇಹಿತರು ಬಂದು ಹೋಗಬಹುದು ಆದರೆ ನೆರೆಮನೆಯವ ಹೋಗುವುದೇ ಇಲ್ಲ.
- ನಾನು ಅಂಧನಲ್ಲ, ಅಂದ.
- ಪದಬಂಧ ರಚಿಸಿದವನು ತೀರಿಕೊಂಡ. ಅವನ ಆತ್ಮಕ್ಕೆ 2, 3.
- ಇತರರನ್ನು ನಾಯಕರಾಗಲು ಹುರಿದುಂಬಿಸುವವನೇ ನಿಜವಾದ ನಾಯಕ.
- ವಿಶ್ವಾಸಾರ್ಹತೆ ಎಂಬುದು ಪಡೆಯುವುದು ಕಷ್ಟ, ಕಳೆದುಕೊಳ್ಳುವುದು ಸುಲಭ, ಕಳೆದುಕೊಂಡ ಮೇಲೆ ಮರಳಿ ಪಡೆಯುವುದು ಮತ್ತೂ ಕಷ್ಟ.
- ಅರ್ಧ ಸತ್ಯಗಳ ಬಗ್ಗೆ ಎಚ್ಚರದಿಂದಿರಿ. ಏಕೆಂದರೆ ನಿಮಗೆ ದೊರೆಯುವುದು ಸುಳ್ಳಿನ ಭಾಗವಾಗಿರಬಹುದು.

# ಈ ಚಪ್ಪಲಿಗಳದ್ದೇ ಒಂದು ಕಥೆ

**- ಡಾ. ನಾ. ಡಿಸೋಜ**

**ಒ**ಮ್ಮೆ ನಾಡಿಗೇರ್ ಕೃಷ್ಣರಾಯರು ದಾವಣಗೆರೆಗೆ ಹೋದವರು ಚಪ್ಪಲಿ ಕೊಳ್ಳಲೆಂದು ಒಂದು ಚಪ್ಪಲಿ ಅಂಗಡಿಗೆ ಹೋದರಂತೆ. ಅಂಗಡಿಯಾತ ಅವರನ್ನ ಗೌರವದಿಂದಲೇ ಸ್ವಾಗತಿಸಿದ. ಅಂಗಡಿಯನ್ನು ಅಚ್ಚುಕಟ್ಟಾಗಿ ಇರಿಸಿದ್ದನ್ನು ಕಂಡು ಕೃಷ್ಣರಾಯರು ತಮ್ಮ ಸಂತಸ ವ್ಯಕ್ತಪಡಿಸಿದಾಗ ಅಂಗಡಿಯವ ''ನೀವು ಭಾಷಣ ಮಾಡುವಾಗ ಮಾತನ್ನ ಜೋಡಿಸುತ್ತೀರಲ್ಲ ಸಾರ್, ಹಾಗೆ ನಾನು ನನ್ನ ಅಂಗಡಿಯಲ್ಲಿ ಚಪ್ಪಲಿಗಳನ್ನ ಜೋಡಿಸಿದ್ದೇನೆ'' ಎಂದು ಹೇಳಿ ಕೃಷ್ಣರಾಯರನ್ನ ಬೆಚ್ಚಿ ಬೀಳಿಸಿದನಂತೆ. ಚಪ್ಪಲಿ ತೋರಿಸು ಎಂದಾಗ ಮೂರು ನಾಲ್ಕು ಜೊತೆ ಚಪ್ಪಲಿ ತಂದು ಮುಂದಿಟ್ಟ, ಅದರಲ್ಲಿ ಒಂದನ್ನು ತೋರಿಸಿ ''ಇದು ನಿಮ್ಮ ಮುಖಕ್ಕೆ ಚೆನ್ನಾಗಿ ಒಪ್ಪುತ್ತೆ, ತೆಗೆದುಕೊಳ್ಳಿ'' ಎಂದನಂತೆ. ''ಬಾಳಿಕೆ ಬರುತ್ತೇನಪ್ಪ?'' ಎಂದು ಇವರು ಕೇಳಿದಾಗ ಆತ ''ಬಾಯಲ್ಲಿ ಇಟ್ಟುಕೊಂಡು ಜಗಿದು ನೋಡಿ ಸಾರ್, ಎರಡು ತಿಂಗಳಾದರೂ ಹರಿಯೋದಿಲ್ಲ'' ಅಂದನಂತೆ.

**ಕಾಲಿಗೆ ತೊಡುತ್ತಾರೆ ಎಂಬ ಕಾರಣಕ್ಕಾಗಿ ಇದಕ್ಕೆ ಕನಿಷ್ಠ ಸ್ಥಾನ**

ಚಪ್ಪಲಿ ಎಂದಾಗಲೆಲ್ಲಾ ನನಗೆ ಈ ಕತೆ ನೆನಪಾಗುತ್ತದೆ.

ಈ ಚಪ್ಪಲಿಯದ್ದೇ ಒಂದು ಕತೆ. ಈ ದೇಶದಲ್ಲಿ ಇದು ಎಲ್ಲರಿಗೂ ಬೇಕಾದ ಆದರೆ ಯಾರಿಗೂ ಬೇಡದ ವಿಚಿತ್ರ ವಸ್ತು. ಹಿಂದೆ ಒಂದು ಕಾಲದಲ್ಲಿ ನಮ್ಮ ರಸ್ತೆಗಳೆಲ್ಲಾ ಸೆಗಣಿ, ಕೆಸರು, ಹೊಲಸಿನಿಂದ ಕೂಡಿ ಗಲೀಜು ಗಲೀಜಾಗಿ ಇರುತ್ತಿದ್ದುದರಿಂದ ಆ ಜಾಗದಲ್ಲಿ ತಿರುಗಾಡಿ ಬರುವ ಚಪ್ಪಲಿಗೆ ಮರ್ಯಾದೆ ಇರಲಿಲ್ಲ. ಈ ರಸ್ತೆಯ ಮೇಲಿನ ಹೊಲಸು ಮನೆಯೊಳಗೆ ಬಾರದಿರಲೆಂದು ಇದನ್ನ ಮನೆಯ ಹೊರಗೇ ಇಡುವ ಒಂದು ಪದ್ಧತಿ ಚಾಲ್ತಿಗೆ ಬಂದಿರಬಹುದು. ಅಲ್ಲದೆ ಇದನ್ನ ಕಾಲಿಗೆ ತೊಡುತ್ತಾರೆ ಅನ್ನುವ ಕಾರಣಕ್ಕೆ ಅದಕ್ಕೆ ಕನಿಷ್ಠ ಸ್ಥಾನ. ಮನೆಗಳಲ್ಲಂತೂ ಅದಕ್ಕೊಂದು ಸ್ಥಾನವನ್ನು ನಾವು ಮೀಸಲಿರಿಸಿದ್ದೇವೆ. ಆ ಸ್ಥಾನ ದಾಟಿ ಅದು ಮುಂದೆ ಬರುವಂತೆಯೇ ಇಲ್ಲ.

ಚಪ್ಪಲಿಯ ಈ ಸ್ಥಾನದ ಹಾಗೆಯೇ ಹೆಣ್ಣಿಗೂ ಒಂದು ಸ್ಥಾನವನ್ನ ನಾವು ನೀಡಿದ್ದೇವೆ ಅನ್ನುವ ವಿಷಯ ಎತ್ತಿಕೊಂಡು ಲೇಖಕಿ ಸಾ.ರಾ. ಅಬೂಬಕರ್ ಅವರು ''ಚಪ್ಪಲಿ'' ಅನ್ನುವ ಒಂದು ಕಾದಂಬರಿಯನ್ನು ಕೂಡ ಬರೆದಿದ್ದಾರೆ. ಇದು ಎಲ್ಲ ಗಂಡಸರೂ ದಯವಿಟ್ಟು ಓದಬೇಕಾದ ಒಂದು ಕೃತಿ.

ಕೆಲ ಕಡೆಗಳಲ್ಲಿ ಶ್ರೀಮಂತರು, ಒಡೆಯರ ಮನೆಯ ಮುಂದೆ ನಡೆದುಕೊಂಡು ಹೋಗುವ ಆಳು ಮಕ್ಕಳು ಶ್ರೀಮಂತರ ಮನೆಯ ಮುಂದೆ ಚಪ್ಪಲಿ ತೊಟ್ಟು ಹೋಗುವಂತಿರಲಿಲ್ಲ, ಅವರು ಅದನ್ನ ಕೈಯಲ್ಲಿ ಹಿಡಿದೇ ಹೋಗಬೇಕು. ಕಾಗೋಡು ಸತ್ಯಾಗ್ರಹಕ್ಕೆ ಕಾರಣವಾದ ಹಲವು ಅಂಶಗಳಲ್ಲಿ ಇದೂ ಒಂದು. ಆಳುಗಳು ಒಡೆಯರ

ಮನೆಯ ಮುಂದಿನಿಂದ ಹೋಗುವಾಗ ಚಪ್ಪಲಿಯನ್ನು ಕೈಯಲ್ಲಿ ಹಿಡಿದು ಹೋಗ ಬೇಕಿತ್ತು. ಇದು ಈ ಹೋರಾಟಕ್ಕೆ ಕಾರಣವಾಯಿತು.

ಚಪ್ಪಲಿ ಒಂದು ಕಾಲದಲ್ಲಿ ಚರ್ಮದಿಂದಲೇ ತಯಾರಾಗುತ್ತಿತ್ತು. ನಂತರ ಅದನ್ನ ಬಟ್ಟೆ, ಮರ, ಪ್ಲಾಸ್ಟಿಕ್ ಎಂದೆಲ್ಲಾ ಬೇರೆ ಬೇರೆ ವಸ್ತುಗಳಿಂದ ತಯಾರು ಮಾಡಲು ಪ್ರಾರಂಭಿಸಿದರು. ಆದರೆ ಅದರ ಬೆಲೆ ಮಾತ್ರ ಹೆಚ್ಚಲಿಲ್ಲ ಅನ್ನುವುದು ವಿಶೇಷ. ಬೆಲೆ ಅಂದರೆ ಮೌಲ್ಯ ಅದರ ದರ ಇಂದು ಹೆಚ್ಚಾಗಿದೆ.

ಇದರ ಜೊತೆಗೆ ಚಪ್ಪಲಿಯನ್ನ ಚರ್ಮದಿಂದ ತಯಾರು ಮಾಡುತ್ತಾರೆ ಅನ್ನುವ ಕಾರಣಕ್ಕೆ ಇದು ದೇವಸ್ಥಾನದೊಳಗೆ ಪ್ರವೇಶಿಸುವಂತಿಲ್ಲ. ಹೀಗಾಗಿ ದೇವಸ್ಥಾನಗಳಲ್ಲಿ ಇದಕ್ಕೆ ವಿಶೇಷ ಸ್ಥಾನಮಾನ. ಹೊರಗೆ ಒಂದು ಅಟ್ಟಣಿಗೆಯನ್ನ ಮಾಡಿ ಅಲ್ಲಿ ಸಾಲುಸಾಲಾಗಿ ಚಪ್ಪಲಿ ಇರಿಸಿ, ನಂತರ ಅದರ ಮೇಲೊಂದು ಚೀಟಿ ಇರಿಸಿ ಈ ಚೀಟಿಯ ಇನ್ನೊಂದು ಪ್ರತಿಯನ್ನ ಚಪ್ಪಲಿ ಮಾಲಿಕನಿಗೆ ನೀಡಿ ಅವನು ಬಂದ ಕೂಡಲೇ ಅವನ ಚಪ್ಪಲಿಯನ್ನ ಅವನಿಗೇನೆ ಕೊಡುವ, ಈ ಕೆಲಸಕ್ಕಾಗಿ ಒಂದಿಷ್ಟು ಹಣ ಪಡೆಯುವ ಪರಿಪಾಠ ಕೂಡ ಇದೆ.

ಅಹಮದಾಬಾದಿನ ಒಂದು ಮಸೀದಿಗೆ ನಾನು ಹೋಗಿದ್ದೆ. ಅಲ್ಲಿ ಚೀಟಿ ಕೊಡಲಿಲ್ಲ. ಆದರೆ ಅಲ್ಲಿದ್ದ ಮನುಷ್ಯ ಅವರವರ ಚಪ್ಪಲಿಯನ್ನು ಅವರವರಿಗೇನೆ ಕೊಡುವ ರೀತಿ ಕಂಡು ನಾನು ಬೆರಗಾದೆ. ಸಾವಿರಾರು ಜನ ಬಿಟ್ಟು ಹೋದ ಚಪ್ಪಲಿಯನ್ನ ಶುಚಿಯಾಗಿ ಒರೆಸಿ, ಅದರ ಮಾಲಿಕ ಬಂದ ಕೂಡಲೇ ಆ ಚಪ್ಪಲಿಯನ್ನ ಅವರ ಮುಂದೆ ಇರಿಸಿ ಆತ ನಸುನಗುತ್ತಿದ್ದ. ಇದೂ ಒಂದು ಬಗೆಯ ಚಪ್ಪಲಿ ಸೇವೆ ಅಂದು ಕೊಂಡೆ ನಾನು.

ನಮ್ಮಲ್ಲಿ ಕೂಡ ಕೆಲ ಸಂಘಗಳ ಬೈಠಕ್ ನಡೆದಾಗ ಅಲ್ಲಿ ಹೊರಗೆ ಚಪ್ಪಲಿ ಇಡುವ ಕ್ರಮವನ್ನ ನೋಡಿದಾಗ ಅಚ್ಚರಿಯಾಗುತ್ತದೆ. ಸಾಲಾಗಿ ಒಂದರ ಪಕ್ಕದಲ್ಲಿ ಒಂದರಂತೆ ಈ ಚಪ್ಪಲಿಗಳು ಕುಳಿತಿರುವುದನ್ನ ಕಂಡಾಗ ಈ ಶಿಸ್ತು ಜನರಿಗೆ ಏಕೆ ಬರುವುದಿಲ್ಲ ಎಂದು ನಾನು ಬಹಳ ಸಲ ಯೋಚಿಸಿದ್ದೇನೆ.

ಆದರೆ ಕೆಲ ದೇವಾಲಯಗಳ ಮುಂದೆ ಚಪ್ಪಲಿ ಇರಿಸಿ ಒಳಹೋದವರು ದೇವರ ಮುಂದೆ ನಿಂತು ಕೈ ಮುಗಿಯುವಾಗ ಅವರು ಹೊರಗಿರಿಸಿದ ಚಪ್ಪಲಿಯ ಬಗ್ಗೆಯೇ ಚಪ್ಪಲಿ ಚಿತ್ತರಾಗುವ ದಿನಗಳು ಈಗ ಬಂದಿರುವುದನ್ನ ನಾನು ನೋಡಿದ್ದೇನೆ. ಏಕೆಂದರೆ ಇಂದು ಚಪ್ಪಲಿಯ ಬೆಲೆ ಕೂಡ ಬಂಗಾರದ ಬೆಲೆಯ ಹಾಗೆ ಏರುತ್ತಿದೆ. ಅಂತಹಾ ಬೆಲೆ ಬಾಳುವ ವಸ್ತುವನ್ನ ದೇವರ ಮೇಲಿನ ಭಕ್ತಿಗೆ ಕಳೆದುಕೊಳ್ಳುವುದು ಅಂದರೆ ಕೆಲವರಿಗೆ ಇದು ದುಬಾರಿ ಭಕ್ತಿ ಆಗುತ್ತದೆ.

ಹೀಗಾಗಬಾರದು ಅನ್ನುವ ಕಾರಣಕ್ಕೆ ನನ್ನ ಸ್ನೇಹಿತರು ಒಂದು ಉಪಾಯ ಕಂಡು ಕೊಂಡಿದ್ದಾರೆ. ಅವರು ದೇವಾಲಯಕ್ಕೆ ಹೋಗಲಿ ಇಲ್ಲ ಕಲ್ಯಾಣ ಮಂಟಪಕ್ಕೆ ಹೋಗಲಿ ಎರಡೂ ಚಪ್ಪಲಿಗಳನ್ನು ಬೇರ್ಪಡಿಸಿ ಒಂದನ್ನ ಬಾಗಿಲ ಬಲಗಡೆಗೆ, ಇನ್ನೊಂದನ್ನ ಎಡಗಡೆಗೆ ಇಟ್ಟು ನಿಶ್ಚಿಂತೆಯಿಂದ ಇರುತ್ತಾರೆ. ಚಪ್ಪಲಿ ಕದಿಯುವ ಕಳ್ಳ ಅವರ ಈ ಉಪಾಯವನ್ನ ಅರಿತ ದಿನ ಮಾತ್ರ ಅವರು ತಮ್ಮ ಚಪ್ಪಲಿಯನ್ನ ಕಳೆದುಕೊಳ್ಳಬೇಕಾಗುತ್ತದೆ.

ಆದರೆ ಈವರೆಗೆ ಕ್ರಿಶ್ಚಿಯನ್ನರಿಗೆ ಈ ಚಪ್ಪಲಿ ಕಾಟ ಇರಲಿಲ್ಲ. ಅವರು ಚಪ್ಪಲಿ ಬೂಡ್ಸು ಇತ್ಯಾದಿಗಳನ್ನ ತೊಟ್ಟುಕೊಂಡೇ ಇಗರ್ಜಿಯೊಳಗೆ ನಿರಾಂತಂಕವಾಗಿ ಪ್ರವೇಶಿಸಿ ಪ್ರಾರ್ಥನೆ ಸಲ್ಲಿಸಿ, ದಿವ್ಯ ಪ್ರಸಾದ ಪಡೆದು ಬರುತ್ತಿದ್ದರು. ಆದರೆ ಈಗೀಗ ಇಗರ್ಜಿಗಳ ಭಾರತೀಕರಣ ನಡೆದು ಚಪ್ಪಲಿ ಇತ್ಯಾದಿಗಳನ್ನ ಇಗರ್ಜಿ ಹೊರಗೇ ಬಿಟ್ಟು ಹೋಗಬೇಕಾದ ಪರಿಸ್ಥಿತಿ ಬಂದಿದೆ. ಇದು ಈ ಜನರಿಗೆ ತುಸು ಇರುಸು ಮುರುಸಿನ ಪ್ರಸಂಗ. ಏಕೆಂದರೆ ಈ ಜನ ತೊಡುವ ಪಾದರಕ್ಷೆಗಳು ಬಹಳ ಬೆಲೆ ಬಾಳುವುದರಿಂದ ಎಷ್ಟೇ ಕಷ್ಟಪಟ್ಟರು ಇವರಿಗೆ ದೇವರ ಮೇಲೆ ಏಕಾಗ್ರತೆಯನ್ನು ಸಾಧಿಸಲು ಆಗುತ್ತಿಲ್ಲವಂತೆ. ಅಲ್ಲದೆ ಇಗರ್ಜಿ ಹೊರಗಡೆ ಸಾಲು ಸಾಲಾಗಿ ಇರಿಸಿರುವ ಚಪ್ಪಲಿಗಳು ನ್ಯಾನ್ಸಿ ಬಂದಿದ್ದಾಳೆಯೇ, ಅವಳ ಜೊತೆಯಲ್ಲಿ ಅವಳ ತಾಯಿ ಬಂದಿದ್ದಾಳೆಯೇ, ಫ್ಲೋರೀನಾ ಬಂದಿದ್ದಾಳೆಯೇ ಮೊದಲಾದ ವಿಷಯವನ್ನ ಆಸಕ್ತ ತರುಣರಿಗೆ ತಿಳಿಸುವುದು ಕೂಡ ಒಂದು ಆತಂಕದ ವಿಷಯವಾಗಿದೆ.

ಇನ್ನು ಚಪ್ಪಲಿ ಅಂದ ಕೂಡಲೇ ನೆನಪಿಗೆ ಬರುವುದು ಶ್ರೀರಾಮ ಪಾದುಕಾ ಪಟ್ಟಾಭಿಷೇಕದ ವಿಷಯ. ಭರತ ಶ್ರೀರಾಮನ ಪಾದುಕೆಗಳನ್ನ ಸಿಂಹಾಸನದ ಮೇಲಿರಿಸಿ ರಾಜ್ಯಭಾರವನ್ನ ಮಾಡಿದ ಅನ್ನುವುದು ಒಂದು ಅಪೂರ್ವವಾದ ಘಟನೆ. ಇಷ್ಟೇ ಅಲ್ಲ, ಶ್ರೀರಾಮ ತನ್ನ ವನವಾಸ ಮುಗಿದ ಕೂಡಲೇ ಹನುಮಂತನನ್ನ ಕಳುಹಿಸಿ ಭರತ ತನ್ನ ದಾರಿ ಕಾಯುತ್ತಿದ್ದಾನೆಯೇ ಅಥವಾ ರಾಜ್ಯದ ವ್ಯಾಮೋಹ ಅವನಲ್ಲಿ ಕಾಣಿಸಿಕೊಂಡು ಆತ ಶ್ರೀರಾಮ ಬಾರದಿದ್ದರೂ ಪರವಾಗಿಲ್ಲ, ತಾನೇ ರಾಜ್ಯವನ್ನ ಆಳುತ್ತೇನೆ ಅನ್ನುವ ಹಂಬಲದಲ್ಲಿ ಇದ್ದಾನೆಯೇ ಅನ್ನುವುದನ್ನ ಪರೀಕ್ಷಿಸಿದ್ದು. ಭರತ ತನ್ನ ದಾರಿ ಕಾಯುತ್ತಿದ್ದಾನೆ ಅನ್ನುವುದು ಖಚಿತವಾದ ಮೇಲೆಯೇ ರಾಮ ಬಂದು ತನ್ನ ಸ್ಥಾನವನ್ನ ಸ್ವೀಕರಿಸಿದ ಅನ್ನುವುದು ಇನ್ನೊಂದು ಅಪೂರ್ವವಾದ ವಿಷಯ.

ಗುರುಗಳ ಸಂತರ ಚಪ್ಪಲಿಗಳಿಗೆ ಗೌರವ ತೋರಿಸುವ ಪರಂಪರೆ ಇಲ್ಲಿಂದ ಆರಂಭವಾಗಿರಲೂ ಬಹುದು. ಬಸವಣ್ಣನವರ ಬದುಕಿನಲ್ಲಿ ಕೂಡ ಈ ಚಪ್ಪಲಿ ಒಂದು ಆಟ ಆಡಿತು. ಸಮಗಾರ ಹರಳಯ್ಯನಿಗೆ ಬಸವಣ್ಣನವರು ''ಶರಣು ಶರಣಯ್ಯ'' ಎಂದು ಹೇಳಿದ್ದೇ ತನಗೆ ಬಸವಣ್ಣನವರು ಹೆಚ್ಚಿನ ಗೌರವ ನೀಡಿದರೆಂದು ತಿಳಿದ ಹರಳಯ್ಯ ತನ್ನ ತೊಡೆಯಿಂದ ಚಮ್ಮಾವುಗೆಗಳನ್ನ ಮಾಡಿ ಅರ್ಪಿಸುತ್ತಾನೆ. ಬಸವಣ್ಣ ಅದನ್ನ ಕಾಲಿಗೆ ಧರಿಸದೆ ಅದನ್ನ ತಲೆಯ ಮೇಲೆ ಇರಿಸಿಕೊಳ್ಳುತ್ತಾರೆ. ಆದರೆ ಮಂತ್ರಿ ಮಧುವರಸ ಅದನ್ನ ಕಾಲಲ್ಲಿ ಮೆಟ್ಟಿದಾಗ ಅವನ ಮೈಯಲ್ಲಿ ತೊನ್ನು ಕಾಣಿಸಿಕೊಳ್ಳುತ್ತದೆ. ಇದು ಚಮ್ಮಾವುಗೆಯ ಕತೆ.

ಹಿಂದೆ ಮಾತಿನಲ್ಲಿ ಮೊಟಕಿಸುವುದನ್ನ ಶಾಲಿನಲ್ಲಿ ಚಪ್ಪಲಿ ಸುತ್ತಿ ಹೊಡೆದುದಕ್ಕೆ ಹೋಲಿಸುತ್ತಿದ್ದರು. ಆದರೆ ಇಂದು ಶಾಲು ದುಬಾರಿ ಆಗಿರುವುದರಿಂದ ನೇರವಾಗಿ ಚಪ್ಪಲಿಯಿಂದಲೇ ಸೇವೆ ಮಾಡುವುದು ಜಾಸ್ತಿಗೆ ಬಂದಿದೆ. ಸಭೆ ನಡೆಯುವಾಗ ಚಪ್ಪಲಿ ಎಸೆಯುವುದು, ಬೂಡ್ಸು ಎಸೆಯುವುದು ಈಗ ಸಾಮಾನ್ಯ ಪ್ರತಿಭಟನೆಯ ಒಂದು ಅಂಗವಾಗಿ ಈ ಚಪ್ಪಲಿ ಎಸೆತ ಪ್ರಾರಂಭವಾಗಿದೆ.

ಮೊನ್ನೆ ಮಂಗಳೂರಿನ ಮಹಿಳೆಯರು ಸಾಲು ಸಾಲಾಗಿ ನಡೆಯುತ್ತಿರುವ ಅತ್ಯಾಚಾರ ಪ್ರಕರಣವನ್ನ ಪ್ರತಿಭಟಿಸಲು ದೊಡ್ಡದೊಂದು ಚಪ್ಪಲಿಯ ಮೆರವಣಿಗೆ ಮಾಡಿದ್ದು ಪತ್ರಿಕೆಗಳಲ್ಲಿ

ವರದಿ ಆಗಿದೆ. ಭೀಮ ಗಾತ್ರದ ಚಪ್ಪಲಿ ಹೆಂಗಳೆಯರ ಹೆಗಲ ಮೇಲೆ ಸವಾರಿ ಮಾಡಿಕೊಂಡು ಹೋದದ್ದು ಒಂದು ಸುಂದರ ದೃಶ್ಯವೇ. ಈ ದೃಶ್ಯದ ಹಿಂದೆ ಒಂದು ದುರಂತ ಕತೆ ಇದ್ದರೂ ಕೂಡ.

ಇನ್ನು ಈ ಸ್ವಾಮೀಜಿಗಳಿಗೂ ಈ ಚಪ್ಪಲಿಗೂ ಏನೋ ಎಣ್ಣೆ ಸೀಗೇಕಾಯಿ. ಸ್ವಾಮೀಜಿಗಳು ಮರದ ಚಪ್ಪಲಿ ಹಾವುಗೆಯನ್ನ ಧರಿಸುವುದರಿಂದ ಯಾವುದೇ ಸಭೆಯಲ್ಲಿ ವೇದಿಕೆಯ ಮೇಲೆ ಸ್ವಾಮೀಜಿಗಳಿದ್ದರೆ ಚಪ್ಪಲಿ ತೊಟ್ಟು ವೇದಿಕೆಯನ್ನ ಏರುವಂತಿಲ್ಲ. ಸ್ವಾಮೀಜಿಗಳು ಈ ಬಗ್ಗೆ ತಲೆಕೆಡಿಸಿಕೊಳ್ಳದಿದ್ದರೂ ಅವರ ಶಿಷ್ಯರು ಬಿಡುವುದಿಲ್ಲ. ಹೀಗಾಗಿ ಸ್ವಾಮೀಜಿಗಳಿರುವ ವೇದಿಕೆಯ ಮುಂಭಾಗದಲ್ಲಿ ರಾಶಿ ಚಪ್ಪಲಿಗಳ ಒಂದು ಪ್ರದರ್ಶನವೇ ಕಾಣಿಸುತ್ತದೆ.

ಚೈನಾ ದೇಶಕ್ಕೂ ಈ ಚಪ್ಪಲಿಗೂ ಒಂದು ಸಂಬಂಧ ಇದೆ. ಹಿಂದೆ ಚೈನಾದ ಮಕ್ಕಳ ಕಾಲುಗಳು ಪುಟ್ಟಪುಟ್ಟದಾಗಿ ಇರಲಿ. ಅವರು ಪುಟಪುಟನೆ ನಡೆಯಲಿ ಅನ್ನುವ ಕಾರಣಕ್ಕೆ ಈ ಮಕ್ಕಳು ಹುಟ್ಟಿದ ಕೂಡಲೆ ಅವುಗಳ ಕಾಲಿಗೆ ಬಿಗಿಯಾದ ಪಾದರಕ್ಷೆ ಹಾಕಿ ಬಿಡುತ್ತಿದ್ದರಂತೆ. ಈಗ ಈ ಪದ್ಧತಿ ಕಡಿಮೆ ಆಗಿದೆ. ಹೀಗೆ ಮಾಡುವುದರಿಂದ ಕಾಲಿನ ಆರೋಗ್ಯ ಕೆಡುತ್ತದೆಂಬುದು ಅಲ್ಲಿಯ ಜನರಿಗೆ ತಿಳಿದು ಬಂದು ಅವರು ಈ ಅಭ್ಯಾಸವನ್ನು ತ್ಯಜಿಸಿದ್ದಾರೆ ಎಂದು ಹೇಳಲಾಗಿದೆ. ಆದರೆ ಹೆಂಗಸರು ತೊಡುವ ಹೈಹೀಲ್ಡ್ ಚಪ್ಪಲಿಗಳು ಮಾಡುವ ಅನಾಹುತ ಒಂದೆರಡಲ್ಲ. ಅದರ ಬಗ್ಗೆ ಮಾತನಾಡದಿರುವುದೇ ಉತ್ತಮ. ಏಕೆಂದರೆ ಈ ಚಪ್ಪಲಿಗಳು ಬಿರುಸಾಗಿ ಬೇರೆ ಇರುತ್ತವೆ.

ಹೌದು, ಚಪ್ಪಲಿ ಹೆಂಗಸರ ಪಾಲಿಗೆ ಒಂದು ಅಸ್ತ್ರವೇ. ಎಷ್ಟೋ ಸಾರಿ ಅದು ಕಾಲಿನಿಂದ ಕೈಗೇನೆ ಬರುತ್ತದೆ. ಆಗ ಗಂಡಸರು ಹೆದರುತ್ತಾರೆ. ಈ ಕಾರಣಕ್ಕಾಗಿಯಾದರೂ ಹೆಂಗಸರು ತಮ್ಮ ಚಪ್ಪಲಿಗೆ ಹೆಚ್ಚು ಕೆಲಸ ಕೊಡುವುದು ಅವರ ಹಿತ ದೃಷ್ಟಿಯಿಂದ ಸರಿ ಅನಿಸುತ್ತದೆ ನನಗೆ.

ಈ ಚಪ್ಪಲಿ ಸಿಹಿ ಮೂತ್ರ ರೋಗ ಇರುವವರ ಪಾಲಿನ ದೇವರು. ವೈದ್ಯರು ಮೊದಲು ಈ ರೋಗಿಗಳಿಗೆ ನೀಡುವ ಉಪದೇಶ ಅಂದರೆ ''ಚಪ್ಪಲಿ ಹಾಕಿಕೊಳ್ಳದೆ ಎಲ್ಲಿಗೂ ಹೋಗಬೇಡಿ'' ಅನ್ನುವುದು. ಅಪ್ಪಿತಪ್ಪಿ ಕಾಲಿಗೆ ಏನಾದರೂ ಚುಚ್ಚಿದರೆ, ಅದು ರಂಪ ರಾಧಾಂತವಾಗಿ, ಕೊನೆಗೆ ರೋಗಿ ತನ್ನ ಕಾಲನ್ನೇ ಕಳೆದುಕೊಳ್ಳಬೇಕಾದ ಸ್ಥಿತಿ ಬರುತ್ತದೆ. ಈ ಕಾರಣಕ್ಕೆ ಸಿಹಿ ಮೂತ್ರ ರೋಗಿಗಳು ಚಪ್ಪಲಿ ತೊಡುವುದನ್ನ ಎಂದೂ ಮರೆಯುವುದಿಲ್ಲ.

ಇನ್ನು ಚಪ್ಪಲಿ ಕುರಿತು ಹೀಗೆ ಬಹಳ ವಿಷಯ ಹೇಳಬಹುದು. ಒಂದು ವಿಷಯ ಹೇಳಿ ಈ ಮಾತನ್ನ ಮುಗಿಸುತ್ತೇನೆ. ಕೆಲ ಮನೆಗಳಲ್ಲಿ ಕಕ್ಕಸಿನ ಮುಂದೆ ಒಂದು ಜೊತೆ ಚಪ್ಪಲಿ ಇರುತ್ತದೆ. ಅದು ಸಮಾನತೆಯನ್ನ ಸಾರುವ ಒಂದು ವಸ್ತು. ಆ ಮನೆಗೆ ಬರುವ ಎಲ್ಲರೂ ಕಕ್ಕಸಿಗೆ ಹೋಗುವ ಮುನ್ನ ಅದನ್ನ ತೊಡಬಹುದು. ಇಲ್ಲಿ ಮೇಲು ಕೀಳು, ಹಿರಿಯ ಕಿರಿಯ, ಹೆಂಗಸು ಗಂಡಸು ಅನ್ನುವ ವ್ಯತ್ಯಾಸ ಇಲ್ಲ. ಚಪ್ಪಲಿ ಕಾಲಿಗೆ ಹಿಡಿಸಿದರಾಯಿತು.

*ಸೌಜನ್ಯ: ಕೆಂಡಸಂಪಿಗೆ*

# ಕೊರವಂಜಿ ಪದಬಂಧ – 1

**- ವಿದ್ಯಾ ವಿ. ಹಾಲಭಾವಿ**



**ಎಡದಿಂದ ಬಲಕ್ಕೆ**

2. ಗರಂ ಆಗಿದ್ದ ರಂಗನಿಗೆ ಈ ತರ ಕಾಣಿಸಿದ ಅಲೆ (3)
4. ಈ ಪರಂಪರೆಯಲ್ಲೇ ಗದ್ದಲ ಕಾಣುತ್ತಿದೆಯಲ್ಲಾ? (2)
5. ಅಯ್ಯೋ ಸಾಕ್ಷರನ ಮುಂದೆ ಪ್ರತ್ಯಕ್ಷನಾದನಲ್ಲ ಈ ಅಸುರ! (3)
7. ಎಂಜಲು ಕೈಲಿ ಕಾಗೆ ಓಡಿಸದವನನ್ನು ಹೀಗನ್ನಿ (3)
9. ಛೆ ಛೆ ಈಗಲ್ಲಬಿಡಿ, ಹಳೇ ಜಮಾನದ ಗಂಡನಿವನು (4)
11. ಗರ ಗರ ತಿರುಗುತ್ತಿದ್ದವನಿಗೆ ಈ ವರ್ಗಕ್ಕೆ ಹೋಗಬೇಕಾದ ಗತಿ ಬಂತೇ? (4)
13. ತಕ್ಕಡಿ ಹಿಡಿದಾತನಿಗೇ ಸಿಕ್ಕಿತಲ್ಲ ಈ ರಿಯಾಯತಿ (3)
15. ಕರವನ್ನೇ ಕಡಿಯಲು ಬಂದಿತಲ್ಲ ಭಲ್ಲೂಕ! (3)
16. ಉದರ ಪ್ರದರ್ಶಿಸಿದ್ದಕ್ಕೇ ಈ ರೇಟು! (2)
17. ಉಲ್ಟಾ ಪಲ್ಟಾ ನಿಂತರೂ ಮಾಡಿದ ದುರಸ್ತಿಯಿದು (3)

*(ಉತ್ತರಕ್ಕೆ 34ನೇ ಪುಟ ನೋಡಿ)*

**ಮೇಲಿಂದ ಕೆಳಕ್ಕೆ**

1. ಈ ಶುದ್ಧ ಬಂಗಾರವನ್ನು ಕೊಡಿಸು ಎಂದಕೂಡಲೇ ಅಪ್ಪನು ಅಂಜಿದ್ದೇಕೆ? (4)
3. ಆ ಜಾಗದಲ್ಲಿ ಗಜದ ಮುಖವನ್ನು ಪ್ರತಿಷ್ಠಾಪಿಸಿ ಪೂಜೆ ಮಾಡುತ್ತಿದ್ದಾರೆ (4)
5. ಅಬ್ಬಾಬ್ಬಾ! ಹತ್ತು ತಲೆಯನ್ನು ಹೊತ್ತು ಹೇಗೆ ಓಡಾಡುತ್ತಿದ್ದನೋ ಈ ಲಂಕಾಸುರ (3)
6. ಅಯ್ಯಯ್ಯೋ! ಯಮನ ಬಳಿ ಹೋಗುವ ಕಾಲ ಬಂದಿದೆಯಲ್ಲಾ?
8. ಲಿಂಗ ಧರಿಸಿದ್ದ ಗಂಡು ಜಾತಿ (3)
10. ಜಡಿ ಮಳೆಯಲ್ಲಿ ಹೋರಾಡಿ, ಸಾಣಿಸಲು ತಂದ ವಂದರಿ (3)
11. ದರ ಮುಗಿಲಿಗೇರಿದ್ದರೂ, ಕಾತರದಿಂದ ಖರೀದಿಸಿದ ಕಾಯಿಪಲ್ಲೆ (4)
12. ತಿರು ತಿರುಗುತ್ತಾ ತಿರುಪೆ ಬೇಡುವವನಿವನು (3)
13. ಕನ್ನಡಿಗರ ಮನೆಗೆ ಕನ್ನ ಹಾಕಿದಾಗ ಕಂಡ ದರ್ಪಣ (3)
14. ಎಲ್ಲರ ಕಣ್ಣು ಈ ತೆಳುವಿನ ಉದರದವಳ ಮೇಲೆಯೇ ಬಿಡಿ (4)

# ಆರೋಗ್ಯ ಮತ್ತು ಸುಳ್ಳು

**- ಕೃಷ್ಣಸುಬ್ಬರಾವ್**

**ಆ**ರೋಗ್ಯಕ್ಕೂ ಮತ್ತು ಸುಳ್ಳಿಗೂ ಒಂದು ಆರೋಗ್ಯಕರವಾದ ಅವಿನಾಭಾವ ಸಂಬಂಧವಿದೆ. 'ಚೆನ್ನಾಗಿದ್ದೀರಾ?' ಎಂಬ ಲೋಕಾರೂಢಿ ಪೀಠಿಕೆಗೆ ಚೆನ್ನಾಗಿಲ್ಲದಿದ್ದರೂ 'ಚೆನ್ನಾಗಿದ್ದೇನೆ' ಎಂಬ ಸುಳ್ಳು ಸಲೀಸಾಗಿ ಹೇಳುತ್ತೇವೆ. ನಮ್ಮ ಖಾಯಿಲೆ ನಮ್ಮ ಹಣೆಬರಹ, ಅದನ್ನೇಕೆ ಪ್ರಚಾರ ಮಾಡಿ ಪರಿಸರ ಕೆಡಿಸಬೇಕೆಂದು ನಮ್ಮ ರೋಗವನ್ನು ರಟ್ಟು ಮಾಡದೆ ಬೇರೆ ವಿಷಯಗಳಿಗೆ ಪ್ರಶ್ನಿಸಿದವರನ್ನು ಎಳೆಯುತ್ತೇವೆ. ಇದಕ್ಕೆ ತದ್ವಿರುದ್ಧವಾಗಿ ಸ್ವಲ್ಪ ತೊಂದರೆಯಿದ್ದಾಗ ಅದನ್ನು ದೊಡ್ಡದು ಮಾಡಿ ಉತ್ಪ್ರೇಕ್ಷೆಯಿಂದ ಇಲ್ಲದ ಖಾಯಿಲೆಯನ್ನು ವಿವರಿಸುವ ಭೂಪರೂ ಇದ್ದಾರೆ.

ಎಷ್ಟೋ ರೋಗಗಳು ಮರಕ್ಕೆ ಅಂಟಿಕೊಳ್ಳಲು ಹೋಗಿ ವಿಫಲವಾಗಿ ಮನುಷ್ಯನ ಹತ್ತಿರ ಹೋಗಿ ಅಂಟುಕೊಳ್ಳುತ್ತದೆ. ಅದಕ್ಕಲ್ಲವೆ ಗಾದೆ ''ರೋಗ ಮನುಷ್ಯನಿಗೆ ಬರದೇ ಮರಕ್ಕೆ ಬರುತ್ಯೆ?'' ಎಂದು ಹುಟ್ಟಿಕೊಂಡಿರುವುದು. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಒಂದು 'ಶುದ್ಧಸುಳ್ಳಿಗೆ' ಜೀವಂತ ಸಾಕ್ಷಿ. ಸುಳ್ಳಿನಲ್ಲಿ ಶುದ್ಧ ಅಶುದ್ಧ ಎಂಬ ಪ್ರಬೇಧಗಳು ಇರುವುದು ಸಧ್ಯಕ್ಕೆ ಸಂಶೋಧಕರಿಗೆ ಬಿಟ್ಟ ವಿಷಯ. ಇಲ್ಲಿ 'ಶುದ್ಧ' ಎಂದರೆ 'ಅಪ್ಪಟ ಸುಳ್ಳು' ಎಂದು ಅರ್ಥೈಸಿದರೆ ಸಾಕು. ತೆಂಗಿನ ಮರಕ್ಕೆ ನುಸಿ ರೋಗ ಬಡಿದು ತೆಂಗಿನಕಾಯಿಗಳನ್ನು ನಾಶಪಡಿಸಿದ್ದನ್ನು ನೋಡಿದ ಮೇಲೆ ರೋಗ ಮರಕ್ಕೆ ಬಿರುತ್ತೆ ಎಂದು ಸಾಭೀತಾಗುವುದಿಲ್ಲವೆ. ಬೇರಿನಿಂದ ಹಣ್ಣುಹಂಪಲುಗಳಿಗೆ ತಲುಪುವುದನ್ನು ನೋಡಿಲ್ಲವೆ. ಆದ್ದರಿಂದ ರೋಗ ಮರಕ್ಕೆ ಮತ್ತು ಮಾನವರಿಗಿಬ್ಬರಿಗೂ ಬರುವುದು ಎಂದಾಯಿತು. ಹೀಗಾಗಿ ವೇದದಂತೆ ಗಾದೆಯೂ ಸುಳ್ಳಲ್ಲವೆ ಎಂಬ ಪ್ರಶ್ನೆ ಏಳುವುದಿಲ್ಲವೆ?

ನಮ್ಮ ಆರೋಗ್ಯದ ಬಗ್ಗೆ ನಾವು ಹೇಳುವ ಸುಳ್ಳು ಅಥವಾ ಅತಿ ಉತ್ಪ್ರೇಕ್ಷೆ ಬೇರೆಯವರ ಆರೋಗ್ಯದ ಬಗ್ಗೆ ನಾವು ಹೇಳುವ ಸುಳ್ಳು ಅಥವಾ ಉತ್ಪ್ರೇಕ್ಷೆ ಹೆಚ್ಚಿನದು. ಎಷ್ಟೋ ವೇಳೆ ನಮ್ಮ ಉತ್ಪ್ರೇಕ್ಷೆ ಎಷ್ಟಿರುತ್ತದೆಯೆಂದರೆ ಅವರು ಬದುಕಿದ್ದಾಗಲೇ ನಾವು ಸಾಯಿಸಿಬಿಡುತ್ತೇವೆ.

''ಏನ್ರೀ, ನಿಮ್ಮ ಮಾತು ಕೇಳಿಕೊಂಡು ರಮೇಶ ಸತ್ತುಹೋದ ಅಂತ ನನ್ನ ಕೊಲಿಗ್ಸ್‌ಗೆಲ್ಲ ಹೇಳಿಬಿಟ್ಟೆ, ಅವರ ಮನೆಗೆ ಬಂದ ನೂರಾರು ಫೋನುಗಳನ್ನು ರಮೇಶನೇ ರಿಸೀವ್ ಮಾಡಿದನಂತೆ'' ಎಂದು ಯಾರೋ ಒಬ್ಬರು ಕೇಳಿದಾಗ ''ಹೌದ, ಅವನು ಸತ್ತಿಲ್ಲವೆ, ಅವನ ಹೆಸರಿನವರು ಇಬ್ಬರು ಇದ್ದರು. ಹೋಗಲಿ ಬಿಡಿ, ಅವನು ಬದುಕಿರೋದಕ್ಕೆ ಸಂತೋಷಪಡೋಣ. ಅವನ ವಯಸ್ಸು ಜಾಸ್ತಿಯಾಗುತ್ತೆ'' ಅಂತ ಒಬ್ಬನ ಆಯಸ್ಸನ್ನು ವೃದ್ಧಿ ಮಾಡಿದ್ದಕ್ಕಾಗಿ ಬೀಗುವುದು ಉಂಟು.

ಕೆಲಸಕ್ಕಾಗಿ ಒಂದೇ ಸಮನೆ ಹೋಗಿ ಬೇಜಾರಾದಾಗ ಇದ್ದಕ್ಕಿದ್ದಂತೆ ನಮಗೆ ಹತ್ತಿರದವರನ್ನು ಸಾಯಿಸಿ ರಜ ಹಾಕುತ್ತೇವೆ. ನನ್ನ ಸಹದ್ಯೋಗಿ ಈ 'ಸಾವಿನ'

ಕಾರಗವಿಟ್ಟುಕೊಂಡು ಚಕ್ಕರ್ ಹೊಡೆಯುವುದರಲ್ಲಿ ದಾಖಲೆ ನಿರ್ಮಿಸಿದ್ದಾನೆ. ಅವನ ತಾಯಿ ಯಾವಾಗಲೋ ಹಾಸಿಗೆ ಹಿಡಿದವರು. ರಾಮಶೇಷ ಎಲ್ಲರ ಪ್ರಕಾರ ಒಬ್ಬ ಆದರ್ಶ ಪುತ್ರ. ಅಮ್ಮನಿಗೋಸ್ಕರ ಎಲ್ಲ ರಜಗಳನ್ನು ಹಾಕಿ ವೇತನ ರಹಿತ ರಜವನ್ನು ಹಾಕುತ್ತಿದ್ದ. ಬ್ಯಾಂಕಿಗೆ ಬಂದಿದ್ದಕ್ಕಿಂತಲೂ ರಜ ಹಾಕಿದ ದಿನಗಳೇ ಹೆಚ್ಚು. ರಜದಲ್ಲಿದ್ದಾಗಲೂ ಬ್ಯಾಂಕಿಗೆ ಬಂದು ಸಹದ್ಯೋಗಿಗಳ ಅನುಕಂಪದ ಅಲೆಯಲ್ಲಿ ಈಜಾಡುತ್ತಿದ್ದ ಎಲ್ಲರಿಂದಲೂ ಸಾಲ ಪಡೆಯುತ್ತಿದ್ದ ಅಮ್ಮನ ಶುಶ್ರೂಷೆಗಾಗಿ. ತಾಯಿ ಸತ್ತು ಎರಡು ವರ್ಷವಾದರೂ ಅಮ್ಮನನ್ನು ತನ್ನ ಸುಳ್ಳಿನ ವೆಂಟಿಲೇಟರ್‌ನಲ್ಲಿಟ್ಟು ಬೇರೆ ಬೇರೆ ಶಾಖೆಗಳಿಂದ ಅಮ್ಮನ ಅನಾರೋಗ್ಯವನ್ನು ಮುಂದಿಟ್ಟುಕೊಂಡು ಸಾಲ ಪಡೆಯುತ್ತಿದ್ದ. ಬೇರೆ ಬೇರೆ ಶಾಖೆಗಳಲ್ಲಿದ್ದ ಸಹದ್ಯೋಗಿಗಳಿಂದ ಎಂಬ ಮಾತು ಪ್ರಚಾರವಾಯ್ತು. ಒಬ್ಬನ ಕೈಯಲ್ಲಿ ಸಿಕ್ಕಿಹಾಕಿಕೊಂಡಾಗ ''ನಮ್ಮಪ್ಪನಿಗೆ ಇಬ್ಬರು ಹೆಂಡತಿಯರು, ಹಿಂದೆ ಸತ್ತವರು ನನ್ನ ಸ್ವಂತ ತಾಯಿ ಈಗ ಸತ್ತವರು ನನ್ನ ಚಿಕ್ಕಮ್ಮ, ಆದರೆ ಅವರು ನನ್ನ ಸ್ವಂತ ಅಮ್ಮನಿಗಿಂತ ಹೆಚ್ಚು ಎಂದು ಸತ್ತ ತಂದೆಯ ಮೇಲೆ ಎರಡನೆ ವಿವಾಹದ ಆರೋಪ ಹೊರಸುತ್ತಿದ್ದ.'' ಸಾಲ ಪಡೆಯುವ ಕಲೆ ಬಗ್ಗೆ ಯಾವುದಾದರೂ ಕ್ರಾಷ್ ಕೋರ್ಸ್ ಇದ್ದರೆ ನಮ್ಮ ರಾಮಶೇಷು ಒಳ್ಳೆ 'ರಿಸೋರ್ಸ್' ವ್ಯಕ್ತಿಯಾಗಲು ಅರ್ಹ.

ಸಕ್ಕಲೆ ಖಾಯಿಲೆ ಇರುವುದು ಸರ್ವೆ ಸಾಮಾನ್ಯವಾಗಿರುವ ಈ ಕಾಲದಲ್ಲೂ ನನ್ನ ಗೆಳೆಯ ರಾಮು ''ಕಾಫಿಗೆ ಸಕ್ಕರೆ ಹಾಕಿದರೆ ಅದರ ಫ್ಲೆವರೇ ಹೋಗಿ ಬಿಡುತ್ತೆ'' ಅಂಥ ಹೇಳಿ ಶುಗರ್‌ಲೆಸ್ ಕಾಫಿ ಕೇಳ್ತಾನೆ ಹೊರತು ತನಗೆ ಡಯಾಬಿಟಿಸ್ ಇದೆ ಅಂತ ಒಪ್ಪಿಕೊಳ್ಳಲ್ಲ.

ನನ್ನ ವಾಕಿಂಗ್ ಗೆಳೆಯನೊಬ್ಬನಿದ್ದಾನೆ. ಅವನು ಪಾರ್ಕಿಗೆ ಬರುವುದು ವಾಕಿಂಗ್‌ಗೆ ಎಂದು ನಾನು ನಂಬುವುದಿಲ್ಲ. ಪಾರ್ಕಿನಲ್ಲಿ ಎರಡು ದಿನಕೊಮ್ಮೆ ನಡೆಯುವ ಉಚಿತ ಆರೋಗ್ಯ ತಪಾಸಣೆಗಾಗಿ ಅವನು ಬರುತ್ತಾನೆ ಎಂದು ನನ್ನ ನಂಬಿಕೆ. ಎಲ್ಲ ತಪಾಸಣೆಗಳಿಗೂ ಕ್ಯೂನಲ್ಲಿ ನಿಲ್ಲುವ ಮೊದಲಿಗನೇ ಅವನು. ತನ್ನ ತೂಕ ಹಾಗೂ ಕೊಬ್ಬನ್ನು ಚೆಕ್ ಮಾಡಿಕೊಳ್ಳುವ ಹಾಗೆ ತಪ್ಪದೆ ಪಾರ್ಕಿನ ಎದುರಿನಲ್ಲಿರುವ ದರ್ಶಿನಿಯಲ್ಲಿ ಕೊಬ್ಬನ್ನು ತುಂಬಿಕೊಳ್ಳುತ್ತಾನೆ. ಅವನಿಗೆ ''ಕೊಬ್ಬ ಕಾನಶ್ಯಿಸ್ ಸುಬ್ಬು'' ಎಂದೇ ಕರೆಯುತ್ತಾರೆ ಗೆಳೆಯರು. ಸುತ್ತಮುತ್ತಲಿನ ಎಲ್ಲಾ ಆಸ್ಪತ್ರೆ, ಕ್ಲಿನಿಕ್‌ಗೆ ಹೋಗಿ ಎಲ್ಲ ರೀತಿಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳುತ್ತಾನೆ. ಎಲ್ಲಾ ರಿಪೋರ್ಟ್ಸ್‌ನಲ್ಲೂ ನೆಗಟಿವ್ ಬಂದು ನಿರಾಶೆಯಿಂದ ನರಳುತ್ತಾನೆ. ಅವನ ಪ್ರಕಾರ ಯಾವ ಲ್ಯಾಬ್ ಕೂಡ ಸರಿಯಾಗಿಲ್ಲ. ಅವನ ದುರಾದೃಷ್ಟವೆಂದರೆ ಯಾವ ಖಾಯಿಲೆಯನ್ನು ಧಾರೆ ಎರೆಯದ ವಂಶವಾಹಿನಿ. ಎಲ್ಲರೂ ತಮ್ಮ ಬಿ.ಪಿ., ಶುಗರ್, ಮಂಡಿನೋವಿನ ಬಗ್ಗೆ ಗಂಟೆಗಟ್ಟಲೆ ಮಾತನಾಡುತ್ತಿದ್ದರೆ ಅವನು ಮೂಖ ಪ್ರೇಕ್ಷಕನಾಗಿರಬೇಕಾಗುತ್ತೆ. ಹೇಳಿಕೊಳ್ಳಲು ಒಂದಾದರೂ ಸಮಸ್ಯೆ ಬೇಡವೆ?

ಇತ್ತೀಚೆಗೆ ಡಾಕ್ಟರ್ ಆದ ನನ್ನ ಗೆಳೆಯನೊಬ್ಬನ ಮಗಳಿಗೆ ನನ್ನ ವಾಕಿಂಗ್ ಗೆಳೆಯ ಅದೇ 'ಕೊಬ್ಬು ಕಾನ್‌ಶಿಯಸ್ ಸುಬ್ಬು' ಬಗ್ಗೆ ಹೇಳಿ ''ನೀನಾದರೂ ಅವನಿಗೆ ಸಹಾಯ ಮಾಡಬಾರದು?'' ಎಂದು ಕೇಳಿದೆ. ಆಗ ಅವಳು, ರೋಗಿಯನ್ನು ನೋಡದೆಯೇ

ಹೇಳಿದಳು ''ನಿಮಗೆ ಯಾರು ಹೇಳಿದರು ನಿಮ್ಮ ಸ್ನೇಹಿತನಿಗೆ ಯಾವ ರೋಗವಿಲ್ಲವೆಂಬುದು, ಅವರನ್ನು ನನ್ನ ಹತ್ತಿರ ಕರೆದುಕೊಂಡು ಬನ್ನಿ'' ಎಂದಳು. ಪರವಾಗಿಲ್ಲ ಅಪ್‌ಕಮಿಂಗ್ ಡಾಕ್ಟರಿಗೆ ಬದುಕುವ ದಾರಿ ಗೊತ್ತಿದೆ ಅನ್ನಿಸಿತು. ನಾನು ನನ್ನ ವಾಕಿಂಗ್ ಗೆಳೆಯನಿಗೆ ವಿಷಯ ತಿಳಿಸಿದೆ. ನಾನು ಅಂದುಕೊಂಡಂತೆ ಹೊರಡಲು ಉತ್ಸಾಹ ತೋರಿಸಿದೆ. ಆದರೆ ಆ ಡಾಕ್ಟರು ಯಾವುದರಲ್ಲಿ ಸ್ಪೆಶಲಿಸ್ಟ್ ಎಂದು ಕೇಳಿದಾಗ ಅವಳೊಬ್ಬ ಫ್ಯಾಮಿಲಿ ಫಿಸಿಶಿಯನ್ ಎಂದು ಸುಳ್ಳು ಹೇಳಿದೆ. ಸೈಕ್ರಿಯಾಟಿಸ್ಟ್ ಎಂದು ಯಾವಾಗಲೂ ಪೇಶಂಟ್‌ಗಳಿಗೆ ಪರಿಚಯ ಮಾಡಿಸಬಾರದು ಎಂದು ನನಗೆ ಯಾರೋ ಹಿಂದೆ ಹೇಳಿದ್ದು ನೆನಪಾಯಿತು.

ಮನೆಯಿಂದ ಎಲ್ಲಾದರೂ ಹೊರಟರೆ ಕಾಲಿಗೆ ಅಂಟುವ ಮೊಮ್ಮಗನಿಂದ ತಪ್ಪಿಸಿಕೊಳ್ಳಲು, ಡಾಕ್ಟರ್ ಬಳಿ 'ಚೂಯ್' ಮಾಡಿಸಿಕೊಳ್ಳಲು ಹೋಗುತ್ತೇವೆ ಎಂದು ನಾನು ಆಗಾಗ್ಗೆ ಹೇಳಿ ಸುಳ್ಳಿನ ಮೆರವಣಿಗೆಯಲ್ಲಿ ಮಾಯವಾಗುತ್ತೇನೆ.

✸

---

## ಹೊಸ ವರುಷಕೆ ಹರುಷದ ಸ್ವಾಗತ

ವರುಷ ಉರುಳಿ ಹೋಗುತ್ತಲಿದೆ ಮತ್ತೊಂದು
ಹೊಸ ವರುಷಕೆ ಸ್ವಾಗತ ಕೋರುವ ಸಮಯವಿದು
ನಗೆ ಮೊಗದಲಿ ಹೊಸ ವರುಷಕೆ ಸ್ವಾಗತ ಕೋರೋಣ
ದುಃಖ ದುಮ್ಮಾನಗಳನ್ನು ದೂರ ದೂರಕ್ಕೆ ಎಸೆಯೋಣ
ಸ್ನೇಹ ಸಂಬಂಧಗಳನ್ನು ಹೆಚ್ಚೆಚ್ಚು ಮಾಡೋಣ
ಎಲ್ಲೆಲ್ಲೂ ನಗೆ ಮಿಂಚಿನ ಸಂಚಾರ ಹೊರಡಿಸೋಣ

---

## ಸುಮ್ನೆ ನಕ್ಬಿಡಿ

- ದೇಶದಲ್ಲಿ ಪ್ರತಿಯೊಬ್ಬ ಪ್ರಜೆಗೂ ವಾಕ್ ಸ್ವಾತಂತ್ರ್ಯ ಇದೆ ಎಂದಾದರೆ ಟೆಲಿಫೋನ್ ಬಿಲ್ಲುಗಳು ಏಕೆ ಬರುತ್ತವೆ.
- ದುಡ್ಡು ಮರದಲ್ಲಿ ಬೆಳೆಯುವುದಿಲ್ಲ ಎನ್ನುವುದು ನಿಜವಾದರೆ ಬ್ಯಾಂಕುಗಳು ಏಕೆ ಬ್ರಾಂಚ್‌ಗಳನ್ನು ತೆರೆಯುತ್ತವೆ.
- ನಾವು ಇನ್ನೊಬ್ಬರಿಗೆ ಸಹಾಯ ಮಾಡಬೇಕು ಎಂದಾದರೆ ಆ ಇನ್ನೊಬ್ಬರು ಇರೋದು ಯಾಕೆ?
- ಕುಡಿದು ವಾಹನ ಚಲಾಯಿಸುವುದು ಅಪರಾಧ ಎನ್ನುವುದಾದರೆ ಬಾರ್ ಅಂಡ್ ರೆಸ್ಟೋರೆಂಟ್‌ಗಳ ಮುಂದೆ ಪಾರ್ಕಿಂಗ್ ಲಾಟ್ ಯಾಕೆ ಇರುತ್ತೆ.

*– ಸುಕೇಶವ*

# ಒಂದು ನೆನಪು

**- ಬೇಲೂರು ರಾಮಮೂರ್ತಿ**

**ಡಿ**ಸೆಂಬರ್ 25 ಅಂದ್ರೆ ಕನ್ನಡದ ಹಾಸ್ಯ ಪಿತಾಮಹ, ಪ್ರಪಿತಾಮಹ, ಪ್ರಪ್ರಪಿತಾಮಹ ನಾ. ಕಸ್ತೂರಿಯವರ ಜನ್ಮದಿನ. ಕನ್ನಡದಲ್ಲಿ ಇಂಥದ್ದೊಂದು ಸೊಗಡು ಇದೆ ಎಂದು ತೋರಿಸಿಕೊಟ್ಟ ಪುಣ್ಯಾತ್ಮ. ಕನ್ನಡಕ್ಕೆ ಕನ್ನಡದ್ದೇ ಬನಿ ಇರುವ ಅನರ್ಥ ಕೋಶ ತಂದುಕೊಟ್ಟ ಮಹಾನುಭಾವ. ಕೊರವಂಜಿಯ ಬೆನ್ನೆಲುಬಾಗಿ ನಿಂತು 25 ವರ್ಷ ಸಾರ್ಥಕ ಸೇವೆ ಮಾಡಿದ ಮಹನೀಯ. ಕೊರವಂಜಿಯ ಬಗೆಗೆ ಅಭಿಮಾನದಿಂದ ''ಕನ್ನಡಿಗರ ಅಳುಮುಂಜಿಯನ್ನು ನಗುಮುಂಜಿ ಮಾಡಿದ್ದು ಕೊರವಂಜಿ'' ಎಂದು ಹೇಳುತ್ತಿದ್ದರು. ಅವರ ನೆನಪಿನಲ್ಲಿ ಅವರದೇ ಧಾಟಿಯಲ್ಲಿ ನಾನು ರಚಿಸಿದ ಒಂದಿಷ್ಟು ಹೊಸ ಅನರ್ಥಗಳು, ಅವರ ನೆನಪಿಗೆ ಅರ್ಪಿತ.

**ಕನ್ನಡಿಗರಿಗೇ ಕನ್ನಡಕ ಹಾಕಿ ಕನ್ನಡ ಕಾಣಿಸಿದ ಕಸ್ತೂರಿ**

ಚಾಮರ - ಮರದ ಕೆಳಗೆ ಚಾ ಕುಡಿಯುವುದು

ಕೋತಿ - ಸಧ್ಯ ನಾನು ಮನುಷ್ಯನಂತಾಗಲಿಲ್ಲವಲ್ಲ ಅಂತ ನೆಮ್ಮದಿಯಿಂದಿರುವ ಪ್ರಾಣಿ

ಚಂದಕ್ಕಿಮಾಮ - ಮಾಮ ತಂದ ಚೆಂದದ ಅಕ್ಕಿ

ಎಣ್ಣೆಶಾಸ್ತ್ರ - ಬಾರುಗಳಲ್ಲಿ ನಡೆಯುವ ಒಂದು ಕ್ರಿಯೆ

ಅವಿವಾಹಿತ - ಪ್ರಪಂಚದಲ್ಲಿರುವ ಎಲ್ಲಾ ಸುಖಗಳನ್ನೂ ಸೂರೆಗೊಳ್ಳುತ್ತಿರುವವ

ಅಡಿಗೆ - ಇಂದಿನ ಯುವಕರು ಅವಶ್ಯವಾಗಿ ಕಲಿಯಬೇಕಾದ್ದು

ಸುಳ್ಳು - ಎಲ್ಲರಲ್ಲೂ ಅಷ್ಟಿಷ್ಟಾದರೂ ಇರುವ ಗುರುವಿಲ್ಲದ ವಿದ್ಯೆ

ಸ್ವೀಕಾರ - ಅಡಿಗೆ ಖಾರ ಇದ್ದರೂ ಸ್ವೀಟಾಗಿದೆ ಅಂತ ಭಯದಿಂದಲೇ ತಿನ್ನುವುದು

ಸುಮ್ಮನಿರುವುದು - ಗಂಡಸು ಮನೆಯಲ್ಲಿ ಇರಬೇಕಾದ ರೀತಿ

ಕೂತುಕೊಳ್ಳುವುದು - ಸಂತೆಯಲ್ಲಿ ತರಕಾರಿ, ಹಣ್ಣು ಇತ್ಯಾದಿಗಳನ್ನು ಕೂತು ಕೊಳ್ಳುವುದು

ಕರೆಗಂಟೆ - ಮನೆಯವರಿಗೆ ಆಪತ್ತು ಬರುತ್ತಿರುವ ಸೂಚನೆ

ನೀರಸ - ನೀನು ಮಾಡಿದ ರಸ (ಸಾರು)

ಸೋಪು - ನಮ್ಮ ಬಟ್ಟೆಯ ಮುಖಾಂತರ ಒಗೆಯುವ ಕಲ್ಲನ್ನು ಶುಭ್ರಗೊಳಿಸುವ ವಸ್ತು

| | | |
|---|---|---|
| ಸ್ನಾನ | – | ಬೇರೆಯವರಿಗೆ ನಮ್ಮ ಬೆವರು ವಾಸನೆ ಬರದಿರಲಿ ಎಂದು ನಾವು ಮಾಡುವ ಕ್ರಿಯೆ |
| ಹಾಡು | – | ಮಾತಿನ ಬದಲು ಬಾಯಿಗೆ ಕೆಲಸ ಕೊಡುವ ಕ್ರಿಯೆ |
| ನಾಯಿ | – | ಕಳ್ಳರು ಬಂದಾಗ ಸುಮ್ಮನಿದ್ದು ನೆಂಟರು ಬಂದಾಗ ಬೊಗಳುವ ಪ್ರಾಣಿ |
| ಎಮ್ಮೆ | – | ಕನ್ನಡ ಬಾರದಿರುವವರ ಬಾಯಲ್ಲಿ ಬರುವ ಜಂಬ ಎನ್ನುವ ಪದ |
| ಲಗ್ನ | – | ಯುವಕರ ಸ್ವಚ್ಛಂದತೆಗೆ ಭಗ್ನ ತರುವ ಕ್ರಿಯೆ |
| ಉಪ್ಪಿಟ್ಟು | – | ಅನೇಕರಿಗೆ ಹೊಟ್ಟೆ ಎನ್ನುವ ಪಿಟ್‌ಗೆ ಇಷ್ಟವಿಲ್ಲದ ವಸ್ತು |
| ಕತ್ತೆ | – | ಮನುಷ್ಯ ಮಾಡುವ ತಪ್ಪಿನಿಂದಾಗಿ ಅವರಿಗೆ ನನ್ನನ್ನು ಹೋಲಿಸುತ್ತಾರಲ್ಲ ಎಂದು ಮರುಗುವ ಪ್ರಾಣಿ |
| ಅಂಚೆಯ ಅಣ್ಣ | – | ನಮ್ಮ ಸುಖ ದುಃಖಗಳನ್ನು ಹೊತ್ತು ತಿರುಗುವವ |
| ಸಭೆ | – | ಮಾತು ನಿಂತೊಡನೇ ಚಪ್ಪಾಳೆ ತಟ್ಟಲು ಕಾಯುತ್ತಿರುವ ಸಮೂಹ |
| ರಾಜಕಾರಣಿ | – | ಮಾತು ಶುರು ಮಾಡಲು ಬರುವ, ಮಾತು ನಿಲ್ಲಿಸಲು ಗೊತ್ತಿಲ್ಲದ ವ್ಯಕ್ತಿ |
| ರಾತ್ರಿ | – | ಕಳ್ಳರಿಗೆ ಶಿಫ್ಟ್ ಶುರುವಾಗುವ ಸಮಯ |
| ಸಾಧು ಪ್ರಾಣಿ | – | ಹಣೆಯ ಮೇಲೆ ಸಾದು ಹಚ್ಚಿರುವ ಪ್ರಾಣಿ |
| ವೃದ್ಧಾಪ್ಯ | – | ಆಧ್ಯಾತ್ಮದ ಮೇಲೆ ನಂಬಿಕೆ ಮೂಡುವ ಕಾಲ |
| ಅಜ್ಜ | – | ಮೊಮ್ಮಕ್ಕಳನ್ನು ಹೊರುವ ವಾಹನ |
| ವೃದ್ಧಾಶ್ರಮ | – | ಈಗಿನ ಮಕ್ಕಳು ತಮ್ಮ ತಂದೆ ತಾಯಿಯರಿಗೆ ಗೊತ್ತು ಮಾಡಿರುವ ಗೂಡು |
| ಏನೂಂದ್ರೆ | – | ಒಂದು ಕಾಲದಲ್ಲಿ ಹೆಂಡತಿ ಗಂಡನನ್ನು ಕರೆಯುತ್ತಿದ್ದ ರೀತಿ |
| ದೇವಸ್ಥಾನ | – | ಸಂಸಾರ ತಾಪತ್ರಯಗಳನ್ನು ಚರ್ಚಿಸುವ ತಾಣ |
| ನಿದ್ದೆ | – | ಆಫೀಸಿನಲ್ಲಿ ಬೇಡವೆಂದರೂ ಬರುವ ಮನೆಯಲ್ಲಿ ಬಾ ಎಂದರೂ ಬಾರದ ಸ್ಥಿತಿ |

✷

# ಜೂನಿಯರ್ ಲಾಯರ್ ಗೋಳ್ಕಥೆ

**- ಎಸ್. ರಾಜಗೋಪಾಲಾಚಾರಿ**

*(ಧಾಟಿ : ಐಗಿರಿ ನಂದಿನಿ ವಿಶ್ವ ವಿನೋದಿನಿ)*

ಲಾಯರ್‌ಗಿರಿ ಅನ್ನೋದು ಈಸೀ ಕೆಲಸ ಅಂತೀರಿ
ನಮ್ಗೆ ಗೊತ್ತು ಅದರ ಕಷ್ಟ ಅದರ ಕಥೆ
ಲಾಯರ್ಸ್ ಎಲ್ಲಾ ಲೈಯರ್ಸ್ ಅಂತ ಲೂಸ್ ಟಾಕ್ ಆಡೋದ್ ನೋಡಿ
ಚುಚ್ಚು ಮಾತು ಕೇಳಿ ಕರುಳು ಚುರ್ ಅನ್ನುತ್ತೆ

ಹೆವೀ ವೈಟ್ ಬುಕ್ಕಿನ ಗಂಟು ಹೊರಲಾರ್ದೆ ಹೊತ್ತು
ಸೀನಿಯರ್ ಹಿಂದೆ ಸುತ್ತಿ ಸುತ್ತಿ ಸುಸ್ತಾಗುತ್ತೆ
ಜೂನಿಯರ್‌ನ ಹೊರಗೆ ಬಿಟ್ಟು ಹೊಟ್ಟೆ ಬಿರಿಯ ತಿನ್ನುತ್ತಿದ್ರೆ
ಕೆಟ್ಟ ಕೋಪ ಬಂದು ನಮ್ಗೆ ಹೊಟ್ಟೆ ಉರಿಯುತ್ತೆ

ಜಡ್ಜ್ ಮುಂದೆ ಕೈಯ ಕಟ್ಟಿ ಅಡ್ಜರ್ನ್‌ಮೆಂಟ್ ಕೇಳಿ ಕೇಳಿ
ಬಗ್ಗಿ ಬಗ್ಗಿ ತಲೆ ಬಾಗಿ ಬೆನ್ನು ನೋಯುತ್ತೆ
ಸುಳ್ಳು ಸುಳ್ಳು ಕಾರಣ ಕೇಳಿ ಕೇಸ್‌ಗಳ್ನ ಮುಂದಕ್ ತಳ್ಳಿ
ಕಕ್ಷಿದಾರನ್ ಕಂಡಾಗ ಅಯ್ಯೋ ಅನ್ಸುತ್ತೆ

ಆರೇಳ್ ವರ್ಷ ಆದರೂನೂ ಅಫಿಡವಿಟ್ಟು ಲಾಯರ್ ಆಗಿ
ಅರೆ ಹೊಟ್ಟೆ ಅರ್ಧ ಕಾಫಿ ಆಕ್ವರ್ಡ್ ಅನಿಸುತ್ತೆ
ಕರೀ ಕೋಟು ಕಿತ್ತಾಕ್ ಬಿಟ್ಟು ಕೋರ್ಟಿಗಲೆಯೋದನ್ನು ಬಿಟ್ಟು
ವರಿ ಇಲ್ದೆ ಕಾಲ ಕಳೆಯೋ ಮನಸ್ಸಾಗುತ್ತೆ

ಯಾವನೋ ಮಾವ ಸಿಕ್ಕಿ ಮಗಳನ್ನ ಧಾರೆ ಎರ್ದು
ಅವ್ಳಿಗೆಲ್ಲ ಆಸ್ತಿ ಕೊಟ್ರೆ ಆರಾಮಾಗುತ್ತೆ
ಕುಂಟು ಕಾಲು ಒಂಟಿ ಹೆಣ್ಣು ಕೋತಿ ಮುಖ ಕೆಟ್ಟ ಬಣ್ಣ
ಸೈಜು ದಪ್ಪಗಿದ್ದರೂನೂ ಅಡ್ಜಸ್ಟ್ ಆಗುತ್ತೆ

ಬೆಂಗ್ಳೂರಲ್ಲಿ ಸೈಟು ಕೊಟ್ಟು ಐವತ್ ಸಾವ್ರ ಬಾಡ್ಗೆ ಬರೋ
ಬಂಗ್ಲೆ ಇದ್ರೆ ಪ್ರಾಬ್ಲಮ್ ಸಾಲ್ವ್ ಆಗುತ್ತೆ
ತಿಂಗ್ಳು ಬರೋ ಇನ್‌ಕಂನಲ್ಲಿ ಸಂಸಾರಾನೂ ತೂಗಿಸ್ಕೊಂಡ್ರೆ
ತಂಗ್ಳು ತಿನ್ನೋ ಗ್ರಹಚಾರ ತಪ್ಪಿ ಹೋಗುತ್ತೆ

ಗಂಟೆಗಟ್ಲೆ ಶಂಖ ಊದಿ ಗಂಟ್ಲು ಹರ್ಕೊಂಡ್ ವಾದ ಮಾಡಿ
ಕೇಸ್ ಲಾ ಕೋಟ್ ಮಾಡ್ತಿದ್ರೆ ಖುಷಿಯಾಗುತ್ತೆ
ಮುಗೀತಲ್ಲ ಆರ್ಗ್ಯೂಮೆಂಟೂ ನಂ ಪರವಾಗೇ ಜಡ್ಜಮೆಂಟೂ
ಡೌಟೇ ಇಲ್ಲ ಹಂಡ್ರೆಡ್ ಪರ್ಸೆಂಟ್ ಸರಿ ಅನ್ನುತ್ತೆ

ಕೇರೇ ಮಾಡ್ದ ಜಡ್ಜ್‌ಗಳು ಈ ಕಿವಿಯಿಂದ ತೂರಿ
ಆ ಕಿವೀಲಿ ಹೋಯ್ತು ಅಂದ್ರೆ ಬೇಜಾರಾಗುತ್ತೆ
ನಮ್ಮ ಟೈಮು ವೇಸ್ಟ್ ಮಾಡಿ ಸುಮ್ನೆ ನಮ್ಗೆ ತೊಂದ್ರೆ ಕೊಟ್ರೆ
ಎರಡರ ಮಧ್ಯೆ ಏನಿಲ್ಲ ಅಂತ ಕನ್‌ಫರ್ಮ್ ಆಗುತ್ತೆ

✸

---



# ಸುಬ್ಬನ ಮನೆ ಹಬ್ಬ

**- ಶ್ರೀನಾಥ ಭಲ್ಲೆ**

**ಭಾ**ದ್ರಪದ ಮಾಸದ ತದಿಗೆ, ಭಾನುವಾರದ ಶುಭದಿನ ಬೆಳಿಗ್ಗೆ ಎಲ್ಲರಿಗಿಂತ ಮೊದಲು ಬಚ್ಚಲಿಗೆ ಧಾಳಿಯಿಟ್ಟು ಶ್ಯಾಂಪೂ ಸ್ನಾನ ಮಾಡಿ, ತೆಳು ವಸ್ತ್ರದಲ್ಲಿ ತಲೆ ಒರೆಸಿಕೊಳ್ಳುತ್ತ ಹೊರಬಂದಿದ್ದು... ನಮ್ ಸುಬ್ಬ!!

ಬಿಳೀ ಹೊಗೆಯ ಮಧ್ಯೆ ಯಕ್ಷನಂತೆ ಹೊರಬಿದ್ದ ಸುಬ್ಬ ... ಒದ್ದೆ ಸಣ್ಣಪಂಚೆ ಧರಿಸಿ, ಮತ್ತೊಂದು ವಸ್ತ್ರದಲ್ಲಿ ತಲೆ ಒರೆಸಿಕೊಳ್ಳುತ್ತ ಹೊರಬಂದವನನ್ನು ಸ್ವಾಗತಿಸಿದ್ದು ಸುಬ್ಬನ ಅಜ್ಜಿಯ ಉರಿಗಣ್ಣು... ಸುಬ್ಬನ ಅಮ್ಮನ ಮುಖದಲ್ಲಿ 'ವಿಘ್ನೇಶ್ವರ ಬರುವ ಮುನ್ನ ದಿನವೇ ವಿಘ್ನ ಶುರುವಾಯ್ತಲ್ಲ' ಅನ್ನೋ ಆತಂಕ... ಅಜ್ಜಿ ಉರಿದುಬಿದ್ದು ನುಡಿದರು ''ಗಂಡಸಿಗ್ಯಾಕೆ ಗೌರಿ ದುಃಖ ಅಂತೀನಿ... ನಿನಗೇನು ಅಂಥಾ ಅವಸರ?...'' ಪಿಳಿ ಪಿಳಿ ಕಣ್ಣು ಬಿಡುತ್ತ ನುಡಿದ ಸುಬ್ಬ ''ಅಜ್ಜಿ... ತಣ್ಣೀರ್ ರಾಮರಾಯರ ಮನೆಯಲ್ಲಿ ಗೌರಿ ಹಬ್ಬದ ಪೂಜೆ ಊಟಕ್ಕೆ ಕರೆದಿದ್ದಾರೆ... ಹೋಗಬೇಕು...'' ಅಜ್ಜಿ ಮತ್ತೆ ಉರಿದುಬಿದ್ದು ''ಅದಕ್ಕೇ? ನಾನು ನಾಲ್ಕು ಘಂಟೆಗೆ ಎದ್ದು ಒಲೆ ಉರಿ ಹಾಕಿ ನೀರು ಕಾಯಿಸಿಟ್ಟದ್ದನ್ನು ನೀನು ಸುರ್ಕೊಂಡು ಬರಬೇಕೂ ಅಂತೇನಾದ್ರೂ ಇದ್ದೀಯಾ?''

''ಹಾಗಲ್ಲ ಅಜ್ಜೀ ಅದು...'' ''ಹು.ಮು.ದೇ... ವಿವೇಚನೆ ಅನ್ನೋದು ಇಲ್ವೇ ಇಲ್ಲ... ಹೋಗ್ತಿರೋದು ಊಟಕ್ಕೆ. ಅವರು ಎಸರು ಇಡೋ ಮುಂಚೆ ನೀನು ಎಲೆ ಮುಂದೆ ಕೂತ್ರೆ ಹೇಗೆ? ಇಷ್ಟಕ್ಕೂ ನೀನು ಬೇಡ ಅಂದ್ರೂ ಅವರ ಮನೇಲಿ ಸ್ನಾನ ಆಗುತ್ತೆ ತಾನೇ?'' ''ಹೋಗಜ್ಜಿ ... ಅವರ ಮನೆಯಲ್ಲಿ ತಣ್ಣೀರು ಸ್ನಾನವೇ ಮಾಡಬೇಕು... ಬಿಸಿ ನೀರು ಕೊಡಲ್ಲ... ಹೋದ ವರ್ಷ ಅವರ ಮನೆಗೆ ಊಟಕ್ಕೆ ಹೋಗಿದ್ದಾಗ, ಆ ಮನೆ ಅಜ್ಜಿ, ಬಚ್ಚಲ ಮನೆ ಬಾಗಿಲಲ್ಲೇ ನಿಂತು ನಾನು ತಣ್ಣೀರು ಹಾಕ್ಕೋತ್ತೀನೋ ಇಲ್ವೋ ಅಂತ ನೋಡ್ತಿದ್ರು...'' ''ನಿನಗೆ ಅಂಥವರೇ ಸರಿ ಹು.ಮು.ದೇ... ಈ ವಯಸಲ್ಲೂ ಅವರ ಕೆಲಸ ಅವರು ಮಾಡಿಕೊಳ್ತಾರೆ ನೋಡು... ಥಣ್ಣಗಿರಲಿ ಜೀವ...'' ''ಥಣ್ಣಗೆ ಇಲ್ದೇ ಏನಜ್ಜಿ? ಅವರೂ ದಿನಾ ತಣ್ಣೀರ ಸ್ನಾನವೇ ಮಾಡೋದು...'' ''ಸರಿ.. ಸರಿ... ಹೊರಗೆ ಬಾ... ನೆತ್ತಿ ಮೇಲಿರೋ ಮೂರು ಕೂದಲೂ ಉದುರಿ ಹೋದೀತು ನೀನು ತಲೆ ಉಜ್ಜಿಕೊಳ್ತಿರೋ ರಭಸಕ್ಕೆ...''

ಒಲೆ ಉರಿ ಸರಿಪಡಿಸಲು ಅಜ್ಜಿ ಬಚ್ಚಲ ಒಳಗೆ ಹೊರಡಲು ಅನುವಾದರು... ಸುಬ್ಬನ ಅಮ್ಮ ''ಅತ್ತೇ, ಈ ಸುಬ್ಬ ಯಥಾಪ್ರಕಾರ ಎಲ್ಲ ಕಡೆ ನೀರು ಚೆಲ್ಲಾಡಿರ್ತಾನೆ. ಜಾರಿ ಬಿದ್ದೀರ. ನಾನೇ ನೋಡ್ತೀನಿ'' ಅಂದು ಬಚ್ಚಲ ಒಳಗೆ ನಡೆದು, ''ಅತ್ತೇ, ಸುಬ್ಬ ಬಾಯ್ಲರ್ ನೀರಿನಲ್ಲಿ ಸ್ನಾನ ಮಾಡಿರೋದು! ಕಾಯಿಸಿರೋ ಹಂಡೆ ನೀರು ಹಾಗೇ ಇದೆ. ನೀವು ಸ್ನಾನ ಮಾಡಬಹುದು'' ಅನ್ನೋದೇ? ''ಅಲ್ಲಾ? ಮೊದಲೇ ಹೇಳಬಾರದೇ? ಹು.ಮು.ದು ಸುಮ್ನೆ ಬೈಸಿಕೊಂಡ...'' ಪದ ಪ್ರಯೋಗ ಅದೇ ಆಗಿದ್ದರೂ ಅದು ಬೈಗುಳ ಆಗಿರಲಿಲ್ಲ! ಅಜ್ಜಿ-ಮೊಮ್ಮಗನ ಗಲಾಟೆ ಇದೇ ಮೊದಲಲ್ಲ, ಹಾಗಾಗಿ ಅವನಮ್ಮ ತಲೆ ಕೆಡಿಸಿಕೊಳ್ಳಲಿಲ್ಲ ಬಿಡಿ!

ಏಳಕ್ಕೆ ಮನೆ ಬಿಟ್ಟ ಸುಬ್ಬ, ಮನೆ ಸೇರಿದ್ದೇ ಎರಡು ಘಂಟೆಗೆ... ಸುಬ್ಬ ಅಡಿಕೆ ಎಲೆ ಮೆಲ್ಲುತ್ತ 'ಉಸ್' ಎಂದು ಕೂತು ''ನಿಮ್ದೆಲ್ಲ ಊಟ ಆಯ್ತಾ?'' ಅಂದ! ''ಅಲ್ವೋ, ಹು.ಮು.ದೇ ನಿಮ್ಮಮ್ಮ ಆಗ್ಲಿಂದ ನಿನಗೆ ಫೋನ್ ಮಾಡ್ತಿದ್ಲು. ಪೂಜೆಗೆ ಹೋದೋನು ಅಲ್ಲೇ ಮಲಗಿಬಿಟ್ಯಾ?'' ಅಂದರು... ''ಅವರ ಮನೆ ಅಜ್ಜಿ ಬಲೇ ಜೋರು ಅಜ್ಜಿ.. ಪೂಜೆ ಮಧ್ಯೆ ನಿನ್ ಫೋನಿನ ಘಂಟೆ ನಮಗೆ ಬೇಡ ಅಂತ ನನ್ ಕೈಲಿ ಕಿತ್ಕೊಂಡು, ವಾಪಸ್ ಬರೋ ಮುಂಚೆ ಕೈಗೆ ಕೊಟ್ರು, ಅದೂ ಅಡಿಕೆ ಎಲೆ ಜೊತೆ... ಅಲ್ಲಿ ಬಂದವರ್ಯಾರೋ ಫೋನ್ ದಾನ ಅಂದುಕೊಂಡರು...'' ಹಸಿದಿದ್ದ ಹೊಟ್ಟೆಗಳಿಗೆ ಇವನ ವರಾತ ಕೇಳಿಸಲಿಲ್ಲ.. ಅಮ್ಮ ಫೋನು ಮಾಡಿದ್ಯಾಕೆ ಅಂತ ಇವನು ಕೇಳಲಿಲ್ಲ, ಅವರೂ ಹೇಳಲಿಲ್ಲ.

''ನಾಳೆ ಪೂಜೆಗೆ ಎಲ್ಲ ಸಿದ್ದ ಮಾಡಬೇಕು... ಆಯಾಸ ಅಂತ ಬಿದ್ಗೋಬೇಡ'' ಅಂತ ಪಾಯಸ ತಿನ್ನುತ್ತ ನುಡಿದರು ಅಜ್ಜಿ... ಅವರನ್ನುವುದಕ್ಕೂ ಬಂದ ಸದ್ದಿಗೂ ಸರಿ ಹೋಗಿತ್ತು.. ಅತ್ಲಾಗೆ ನೋಡಿದರೆ ಸುಬ್ಬ ಕೂತಲ್ಲೇ ಗೊರಕೆ ಹೊಡೀತಿದ್ದ!! ಒಂದೆರಡು ಘಂಟೆ ಕಳೆದು ನಿದ್ದೆ, ಕಾಫಿ ಅಂತ ಸಮಾರಾಧನೆ ಮುಗಿದು ಗಣೇಶನ ಆಗಮನಕ್ಕೆ ಸಿದ್ದ ಮಾಡಲು ಅನುವಾದ ಸುಬ್ಬ !

ಅಜ್ಜಿ ನುಡಿದರು ''ನೆನ್ನೆ ತಂದಿದ್ದ ಮಾವಿನ ಎಲೆ, ಪಂಟ ಎಲ್ಲ ಮೇಜಿನ ಹತ್ರ ಇಟ್ಟಿದ್ದೀನಿ. ಮೊದಲು ಮಂಟಪಕ್ಕೆ ಮಾವಿನ ಎಲೆ ತೋರಣ ಸಿದ್ದಮಾಡಿಕೋ...'' ಉದ್ದನೆಯ ಗೋಣಿಹುರಿಗೆ ಮೂವತ್ತು ಎಲೆಗಳನ್ನು ಪಿನ್ ಮಾಡಿ ''ಅಜ್ಜೀ ಸಾಕಾ?'' ಅಂದ... ''ಹು.ಮು.ದೇ ಇದೇನು ಮಂಟಪಕ್ಕೆ ಅಂತ ಕಟ್ಟಿದ್ಯೋ ಅಥವಾ ಇಡೀ ಬೀದಿಗೇ ಕಟ್ಟಿದ್ಯೋ? ಅಂದಾಜು ಗೊತ್ತಾಗಲ್ವ? ಕೊಡಿಲ್ಲಿ, ನಾನೇ ಬಿಡಿಸಿಕೊಡ್ತೀನಿ... ನಿನ್ನ ಕೈಲಿ ಕೊಟ್ರೆ ಎಲೆಗಳನ್ನ ಹರಿದು ಹಾಕ್ತೀಯಾ..'' ಸುಬ್ಬನ ಕೈಲಿ ಲಾಂಗೂಲದ ತೋರಣ ತೆಗೆದುಕೊಂಡು ಮತ್ತೊಮ್ಮೆ ಸಿಡಿದರು. ''ಎಲೆ ಹಿಂಭಾಗ ಕಾಣೋ ಹಾಗೆ ಪಿನ್ ಒತ್ತಿ ಬಡ್ದಿದ್ದೀಯಲ್ಲೋ? ಥತ್! ನಾನೇ ಮಾಡ್ಕೋತೀನಿ, ನೀನು ಅಲ್ಲಿರೋ ಹೂಗಳನ್ನ ತೊಗೊಂಡ್ ಬಾ... ಮಂಟಪದ ಅಲಂಕಾರಕ್ಕೆ...''

ಹೂವಿನ ಬುಟ್ಟಿ ತಂದ ಸುಬ್ಬ ''ಅಜ್ಜೀ, ಈ ಹೂವು ವಾಸನೇನೇ ಇಲ್ಲ...'' ''ಥತ್! ಹು.ಮು.ದೇ ಪೂಜೆ ಮಾಡೋ ಹೂವಿನ ವಾಸನೆ ನೋಡಬಾರದು ಅಂತ ಗೊತ್ತಾಗೋಲ್ವಾ?'' ''ಶಬರಿ ರಾಮನಿಗೆ ಎಂಜಲು ಹಣ್ಣು ತಿನ್ನಿಸಿದ್ಲು ಅಂತ ನೀವೇ ಕಥೆ ಹೇಳಿದ್ರಲ್ಲಾ ಅಜ್ಜಿ? ಇದೂ ಹಂಗೇ?'' ''ಸರಿ ಸರಿ.. ಈ ತಲೆಹರಟೆಗೇನೂ ಕಮ್ಮಿ ಇಲ್ಲ ನೋಡು. ನಿನ್ ಮೂಗಿಗೆ ಹಿಡಿದ ಆ ಹೂವನ್ನ ಬೇರೆ ಹೂವಿನ ಜೊತೆ ಬೆರೆಸಬೇಡ....'' ''ಈ ಹೂವು ಏನ್ ಮಾಡಲಿ ಅಜ್ಜಿ?'' ''ಮೊರದಗಲ ಕಿವಿ ಇದೆಯಲ್ಲ, ಅದರ ಮೇಲಿಟ್ಕೋ...'' ''ಅಜ್ಜೀ, ನೀವು ನನ್ ಕಿವಿ ಹೇಳಿದ್ರಾ? ಗಣೇಶನ ಕಿವಿ ಹೇಳಿದ್ರೋ?'' ಅಜ್ಜಿಗೆ ಉರಿದುಹೋಯ್ತು ''ಮೂರಾಣೆ ಕೆಲಸ ಮಾಡಲ್ಲ.. ಮಾಡಿದ ಕೆಲಸ ಸರಿಯಾಗೂ ಮಾಡಲ್ಲ... ಅದರ ಮೇಲೆ ಬರೀ ತಲೆಹರಟೆ.''

''ವಾಯಿನ ದಾನಕ್ಕೆ ತೆಂಗಿನಕಾಯಿ ಇಟ್ಟಿದ್ದೀನಿ. ತೊಗೊಂಡ್ ಬಾ...'' ''ಅಜ್ಜೀ, ಬಿಳೀ ಕಾಯಿ ತರಲೋ, ಕರೀ ಕಾಯಿ ತರಲೋ?'' ''ಬಿಳೀ ಕಾಯಿ ನಿನ್ನ ಹಾಗೆ ಎಳಸು ಇರುತ್ತೆ. ಕರೀ ಕಾಯಿ ತೊಗೊಂಡು ಬಾ... ಕಡೇಪಕ್ಷ ಮುಂದಿನ ಜನ್ಮಕ್ಕಾದರೂ ನಿನ್ ತಲೆ ಬಲಿಯುತ್ತೆ...'' ''ಪುರೋಹಿತರಿಗೆ ಕಾಯಿ ಕೊಟ್ರೆ ನನ್ ತಲೆ ಮುಂದಿನ ಜನ್ಮಕ್ಕೆ ಹೇಗೆ ಬಲಿಯುತ್ತೆ?''

''ಅವೆಲ್ಲ ನಿನಗೆ ಅರ್ಥವಾಗೋಲ್ಲ. ಕಾಯಿ ತಂದ್ಯಾ?'' ''ತರ್ತಿದ್ದೀನಿ, ತರ್ತಿದ್ದೀನಿ... ಅಜ್ಜೀ, ಕಾಯಿಗೆ ಜುಟ್ಟಿದೆ. ಹಾಗೇ ಇರ್ಲಾ, ಕಿತ್ತು ಹಾಕ್ಲಾ?'' ''ನಾ ಹೇಳಿದ ಕೆಲಸ ಬಿಟ್ಟು ಒಂದು ಕೆಲಸ ಹೆಚ್ಚಿಗೆ ಮಾಡಿದ್ರೆ, ನಿನ್ ಜುಟ್ಟು ಕಿತ್ತುಬಿಡ್ತೀನಿ. ಸುಮ್ನೆ ತೊಗೊಂಡ್ ಬಾ ಇಲ್ಲಿ.''

ಎರಡು ದಿನದ ಹಿಂದೆಯೇ ಮಂಟಪ ತೊಳೆದು, ಹಿತ್ತಾಳೆ ಪಾಲಿಶ್ ಉಜ್ಜಿ, ಫಳ ಫಳ ಹೊಳೆಯುತ್ತಿದ್ದ ಮಂಟಪಕ್ಕೆ ಹಸಿರು ತೋರಣ, ಮೇಲೆಲ್ಲ ಡೇರೆ ಹೂವು, ಇಳಿ ಬಿಟ್ಟಂತೆ ಒಂದೆರಡು ಫಲಗಳು ಅಂತೆಲ್ಲ ಶೃಂಗಾರ ಆಯಿತು. ಎರಡಡಿ ಎತ್ತರದ ಅಗಲವಾದ ಮೇಜಿನ ಮೇಲೆ ಮಂಟಪ ಕೂಡಿಸಿ ಇಕ್ಕೆಲಗಳಲ್ಲಿ ಹೂವು, ಗರಿಕೆ ಎಲ್ಲ ಸಿದ್ದವಿಟ್ಟಿದ್ದಾಯ್ತು. ಸುಬ್ಬನ ಅಮ್ಮ ಗೆಜ್ಜೆ ವಸ್ತ್ರಕ್ಕೆ ಕುಂಕುಮ ಹಚ್ಚುತ್ತಿದ್ದರು. ನೀರಲ್ಲಿ ಒಮ್ಮೆ ಬೆರಳದ್ದಿ ಒತ್ತಿಯೂ ಒತ್ತಿಕೊಳ್ಳದಂತೆ ಕುಂಕುಮಕ್ಕೆ ಬೆರಳೊತ್ತುವುದನ್ನು ಕಂಡು ಸುಬ್ಬ ''ಅಮ್ಮಾ, ಕುಂಕುಮ ಬಿಸೀನಾ?'' ಎಂದ.

ಅಜ್ಜಿ ಗಣೇಶನನ್ನು ಕೂಡಿಸಲು ಮಂಟಪದ ಒಳಗೆ ಅಕ್ಕಿ ಹರವಿ, ಅದರ ಮೇಲೆ ಓಂ ಎಂದು ಬರೆಯಲು ಹೇಳಿದರು. ''ಕನ್ನಡದಲ್ಲಿ ಬರೀಲಾ? ಇಂಗ್ಲೀಷಿನಲ್ಲಿ ಬರೀಲಾ?'' ಅಂದ ಸುಬ್ಬ... ಈಗ ತಲೆಹರಟೆ ಸರದಿ ಅಜ್ಜೀದು ''ನೀ ಬರೆದ ಓಂ ಮೇಲೆ ಗಣೇಶ ಕೂತ್ಕೋತಾನೆ. ನೀನೇನು ಬರೆದಿದ್ದೇನೂ ಕಾಣಲ್ಲ ಬಿಡು ಅವನಿಗೆ.'' ಸುಬ್ಬನ ಅಮ್ಮ ಮಂಟಪದ ಮುಂದೆ ರಂಗೋಲಿ ಹಾಕಿ, ಕೆಮ್ಮಣ್ಣು ಬಳಿದರು. ''ಅಮ್ಮ, ಆ ಕೆಂಪು ಲೈನ್ ಯಾಕೆ?'' ''ಒಂದು ಕಾರಣ ಅಂದರೆ ಅಲಂಕಾರ, ಇನ್ನೊಂದು ರಂಗೋಲಿ ಯಾರೂ ತುಳೀಬಾರದು ಅಂತ. ಕೆಂಪು ಗೆರೆ ಕಂಡ ಕೂಡಲೆ ಅಲ್ಲೇ ನಿಲ್ಲಿ, ರಂಗೋಲಿ ಇದೆ ಅಂತ....'' ''ಅಂದ್ರೇ, ಸಿಗ್ನಲ್ ಲೈಟ್ ತರಹ...'' ''ಹಾಗೇ ಅಂದುಕೋ'' ಅಂದು ಮಾತಿಗೆ ಅಲ್ಲಿಯೇ ಮಂಗಳ ಹಾಡಿದರು. ಸಕಲ ತಯಾರಿಯೂ ಆಯಿತು.

ಹಬ್ಬದ ಹಗಲು ... ಸುಬ್ಬ ಎಂದಿನಂತೆ ನಿಧಾನವಾಗಿ ಎದ್ದ. ಅಜ್ಜಿಯ ವರಾತ ''ಹಬ್ಬದ ದಿನ ಬೇಗ ಏಳೋದು ಬಿಟ್ಟು, ಇದೇನು ಸೂರ್ಯ ನೆತ್ತಿಗೆ ಬಂದ ಮೇಲೆ ಏಳೋದು?'' ''ಅಲ್ಲಾ, ಅಜ್ಜಿ... ನೆನ್ನೆ ಹಬ್ಬ, ಬೇಗ ಎದ್ದು ಸ್ನಾನ ಮಾಡಿದೆ ಅಂತ ಬೈಸಿಕೊಂಡೆ. ಇವತ್ತು ನಿಧಾನಕ್ಕೆ ಎದ್ದೂ ಬೈಸಿಕೊಂಡೆ. ಇದೊಳ್ಳೇ ಕಥೆಯಾಯ್ತಲ್ಲಾ?'' ''ಸರಿ ಸರಿ ಬೇಗ ಸ್ನಾನ ಮಾಡು... ಇವತ್ತೇನೂ ಊಟಕ್ಕೆ ಕರೆದಿಲ್ವಾ ತಣ್ಣೀರು ರಾಮರಾಯರ ಮನೆಯವರು?''

''ನೆನ್ನೆ ಊಟ ಆದ ಮೇಲೆ ನಾನೇ ಕೇಳಿದೆ ಅಜ್ಜಿ, ನಾಳೆ ಎಷ್ಟು ಹೊತ್ತಿಗೆ ಬರಲಿ ಅಂತ. ಅದಕ್ಕೆ ಅವರು ವರ್ಷಾವರಿ ಗಂಡು ಮಕ್ಕಳ ಹಬ್ಬ, ನಿಮ್ಮ ಮನೇಲಿ ನೀನು ಹಬ್ಬದ ಊಟ ಮಾಡು. ಮುಂದಿನ ಗೌರಿಗೆ ತಪ್ಪದೆ ಬಾ ಅಂದರು...'' ''ಹಾಗೆಲ್ಲ ನೀನೇ ಔತಣ ಇಟ್ಕೊಂಡು ಊಟಕ್ಕೆ ಹೋಗಬೇಡ ಅಂತ ಹೇಳಿ ಹೇಳಿ ಸಾಕಾಯ್ತು ನನಗೂ...'' ''ಅಜ್ಜೀ, ಕಾಫಿ ಕುಡಿದು ಸ್ನಾನಕ್ಕೆ ಹೋಗ್ಲಾ?'' ''ಗಣೇಶನ ಪೂಜೆ ಮಾಡಿ, ಮುಂದಿನ ಜನ್ಮದಲ್ಲಾದರೂ ಚುರುಕು ಬುದ್ಧಿಯವನಾಗಲಿ ಅಂತ ಕೇಳ್ಕೊಂಡ ಮೇಲೇ ಕಾಫಿ, ತಿಂಡಿ ಎಲ್ಲ... ಪ್ರತಿ ವರ್ಷ ಇದೇ ಹಾಡು.''

ಸ್ನಾನ ಮುಗಿಸಿ ಬಂದ ಸುಬ್ಬ, ಅಜ್ಜಿ ಎತ್ತಿಟ್ಟಿದ್ದ ರೇಷ್ಮೆ ವಸ್ತ್ರ ತೊಟ್ಟು, ಅಪ್ಪ ಊರಲ್ಲಿ ಇಲ್ಲದ ಕಾರಣ ಕ್ಯಾಸೆಟ್ ಹಾಕಿ ಶ್ರದ್ಧೆಯಿಂದ ಪೂಜೆ ಮಾಡಿದ ಅನ್ನಿ. ಪೂಜೆ ಮಧ್ಯೆ ತಲೆಹರಟೆ ಮಾಡಿದರೆ ಕಡುಬು ಖೋತ ಅಂತ ಅಜ್ಜಿ ಹೇಳಿದ್ದ ವಿಷಯ ಬೇರೆ ಮಾತು ಬಿಡಿ. ಪೂಜೆ

ಮುಗಿದ ಮೇಲೆ ಬಸ್ಕಿ ಹೊಡೆವ ಕಾರ್ಯಕ್ರಮ. ಇದಂತೂ ಸುಬ್ಬನಿಗೆ ಮಹಾ ಪ್ರಯಾಸದ ಕೆಲಸ. ಇಪ್ಪತ್ತೊಂದು ಬಸ್ಕಿ ಹೊಡೆಯುವುದರ ಜೊತೆಗೆ ಇಪ್ಪತ್ತೊಂದು ಬಾರಿ ಪಂಚೆ ಕಟ್ಟಿಕೊಳ್ಳೋದಂತೂ ಗ್ಯಾರಂಟಿ.

ಅಂತೂ ಉಸ್ ಬುಸ್ ಅಂದುಕೊಂಡು ಇಪ್ಪತ್ತೊಂದು ಬಸ್ಕಿ ಹೊಡೆದು ಸಾಷ್ಟಾಂಗ ಬಿದ್ದ ಗಣೇಶನ ಮುಂದೆ. ಬಸ್ಕಿ ನಂತರ ಸಾಷ್ಟಾಂಗ ಹಿತವಾಗಿತ್ತು. ಹಾಗೇ ಮಲಗಿದ್ದವನನ್ನು ಅಜ್ಜಿಯ ಘರ್ಜನೆ ಎಬ್ಬಿಸಿತು. ''ವಾಯಿನ ದಾನದ ತಟ್ಟೆ ತೆಗೆದುಕೊಂಡು ಹೋಗಿ ಆ ರಾಮರಾಯರಿಗೆ ಕೊಟ್ಟು ನಮಸ್ಕಾರ ಮಾಡಿಕೊಂಡು ಬಾ...'' ಆಯ್ತು ಎಂದು ಮತ್ತೊಮ್ಮೆ ಪಂಚೆ ಬಿಗಿದು ಬಾಳೆ ಎಲೆ ಮುಚ್ಚಿದ್ದ ತಟ್ಟೆಯನ್ನು ಹೊತ್ಕೊಂಡು ಹೊರಟ.

ಒಂದು ಕೈಲಿ ಪಂಚೆ ಹಿಡಿದುಕೊಂಡು, ಮತ್ತೊಂದು ಕೈಲಿ ತಟ್ಟೆ ಹಿಡಿದರೆ ಬಾಳೆ ಎಲೆ ಹಾರಿಹೋಗುತ್ತೆ. ಹಾಗೆಂದು ಎರಡೂ ಕೈಲಿ ತಟ್ಟೆ ಹಿಡಿದರೆ ಪಂಚೆ ಉದುರುತ್ತೆ. ಎರಡು ಕೈಲಿ ಪಂಚೆಯೇ ಹಿಡಿದರೆ ರಾಮರಾಯರ ಮನೆಗೆ ಹೋಗುವ ಗೋಜೇ ಇಲ್ಲ. ಏನು ಮಾಡೊದು? ಮತ್ತೊಮ್ಮೆ ಪಂಚೆ ಬಿಗಿದು, ತಟ್ಟೆಯ ತಳಭಾಗವನ್ನು ಎಡಗೈಲಿ ಹಿಡಿದು, ಬಲಗೈಯಿಂದ ಬಾಳೆ ಎಲೆ ಒತ್ತಿ ಹಿಡಿದು, ಮೊಣಕೈಗಳಿಂದ ಪಂಚೆಯನ್ನು ಒತ್ತಿ ಹಿಡಿದು ಹೊರಟ ನಮ್ ಸುಬ್ಬ!

ಪೂಜೆ ಮಾಡಿದ ಮನೆ ಯಾಕೋ ಬಾಗಿಲು ಹಾಕಿತ್ತು. ಇದೊಳ್ಳೇ ಕಥೆಯಾಯ್ತಲ್ಲ ಅಂದುಕೊಂಡು, ಬಾಗಿಲ ಮುಂದೆ ನಿಂತು ತಲೆಯಿಂದಲೇ ಒಮ್ಮೆ ಬಾಗಿಲನ್ನು ಕುಟ್ಟಿದ ಸುಬ್ಬ. ಗಾಳಿಗೆ ದೀಪ ಆರದಿರಲಿ ಎಂದು ಬಾಗಿಲು ಮುಂದೆ ಮಾಡಿದ್ದರು ಅಷ್ಟೇ. ಬಾಗಿಲ ಹಿಂದೆಯೇ ಇದ್ದ ಅಜ್ಜಿಗೆ ಬಾಗಿಲು ಸರಿಯಾಗಿ ಬಡಿದಿತ್ತು. ಬೆಚ್ಚಿ ಬಿದ್ದ ಅಜ್ಜಿ ಬಾಗಿಲು ತೆರೆದು ನೋಡಿದರೆ ಸುಬ್ಬ, ತಟ್ಟೆಯನ್ನು ಹಿಡಿಯಲಾರದೆ, ಪಂಚೆಯನ್ನು ಹಿಡಿಯಲಾರದೆ ಒದ್ದಾಡ್ತಿದ್ದ.... ಅವನನ್ನು ಬೈಯ್ಯಲು ಮನ ಬಾರದೆ ಮೊದಲು ಒಳಗೆ ಬಾ ಅಂದರು...

''ಅಜ್ಜೀ ಮೊದಲು ಪಂಚೆ ಹಿಡಿದುಕೊಳ್ಳಿ, ನಾನು ತಟ್ಟೆ ಕಟ್ಕೋಬೇಕು'' ಅಂದ... ಪಾಪ ಅಜ್ಜಿಗೆ ಸಂಪೂರ್ಣ ಗೊಂದಲ... ''ಅಯ್ಯೋ ಅಜ್ಜೀ ಮೊದಲು ತಟ್ಟೆ ಹಿಡಿದುಕೊಳ್ಳಿ, ನಾನು ಪಂಚೆ ಕಟ್ಕೋಬೇಕು ಅಂದ...'' ಅಜ್ಜಿಗೆ ತಟ್ಟೆಯನ್ನು ಕೊಡಲು ಹೋಗಿ, ತಟ್ಟೆಯನ್ನು ವಾಲಿಸಿದ ಸುಬ್ಬ ... ಕರೀ ತೆಂಗಿನ ಕಾಯಿ ಉರುಳಿ ಅಜ್ಜಿಯ ಪಾದದ ಮೇಲೆ ಬಿತ್ತು... ಮೊದಲೇ ವಯಸ್ಸಾದವರು, ನೋವು ತಡೆಯದೆ ಕಣ್ಣುಮುಚ್ಚಿ ಜೋರಾಗಿ ಒಮ್ಮೆ ಚೀರಿದರು... ಬೆದರಿದ ಸುಬ್ಬನ ಪಂಚೆ ಉದುರಿ ಬಿತ್ತು... ಪುಣ್ಯಕ್ಕೆ ಸಣ್ಣಪಂಚೆ ಉಟ್ಟಿದ್ದ.

ರಾಮರಾಯರು ಒಳಗಿನಿಂದ ಓಡಿ ಬಂದು, ಆದ ಅವಾಂತರ ಅರ್ಥಮಾಡಿಕೊಂಡು ಸಾವಧಾನವಾಗಿಯೇ ನುಡಿದರು ''ಅಲ್ವೋ ಸುಬ್ಬ! ಗಣೇಶ ಸೊಂಟಕ್ಕೆ ಹಾವು ಸುತ್ಕೊಂಡ ಹಾಗೆ ಒಂದು ಬೆಲ್ಟು ಕಟ್ಕೊಂಡು ಬರಲಿಕ್ಕೆ ಆಗ್ತಿರ್ಲಿಲ್ವೇ? ಅಥವಾ ಜಾರೋ ಜರಿ ಪಂಚೆ ಬದಲು ಮಾಮೂಲಿ ಪಂಚೆ ಉಟ್ಟು ಬಂದಿದ್ರೂ ಸಾಕಾಗಿತ್ತು. ಹೋಗಲಿ ಬಿಡು ಅಮ್ಮನ ಕಾಲು ಮುರುದಿಲ್ಲ ಅಂದುಕೊಳ್ತೀನಿ. ದಾನದ ತಟ್ಟೆ ಅಲ್ಲೇ ಇಡು. ಇಲ್ದೆ ಇದ್ರೆ ನನ್ ಕಾಲೂ ಮುರಿದೀಯಾ?''

ತಟ್ಟೆ ಅಲ್ಲಿಟ್ಟವನೇ ಹೊರ ನಡೆದಿದ್ದ ಸುಬ್ಬ! ಈಗ ಯಾವುದೇ ಗೋಜಲೂ ಇಲ್ಲದೆ, ಎರಡು ಕೈಲಿ ಪಂಚೆ ಹಿಡಿದು ಸುಬ್ಬ ಮನೆ ಸೇರಿಕೊಂಡ....

✸

# ಹನುಮಂತನ ಟಿ.ಎ. ಬಿಲ್ಲು

**- ಸಂಪಟೂರು ವಿಶ್ವನಾಥ್**

**ರಾ**ಮ ರಾವಣರ ಯುದ್ಧ ಮುಗಿದಿತ್ತು. ಆಂಜನೇಯ ತನ್ನ ಟಿ.ಎ. ಬಿಲ್ಲನ್ನು ಕೊಟ್ಟ. ಲಕ್ಷ್ಮಣನಿಗಾಗಿ ಹಿಮಾಲಯದಿಂದ ಸಂಜೀವಿನಿ ಮೂಲಿಕೆಯನ್ನು ತರುವ ಖರ್ಚನ್ನು ಅದರಲ್ಲಿ ನಮೂದಿಸಿದ್ದ.

ಒಂದು ದಿನ ಆಂಜನೇಯ ಮಂಕಾಗಿ ಕೂತಿದ್ದ. ಇದನ್ನು ನೋಡಿದ ಲಕ್ಷ್ಮಣ, ''ಯಾಕಪ್ಪ ಏನಾಯಿತು?'' ಅಂತ ಕೇಳಿದ.

''ಹಣಕಾಸು ಇಲಾಖೆಯ ಉನ್ನತಾಧಿಕಾರಿಗಳು ನನ್ನ ಟಿ.ಎ.ಬಿಲ್ಲನ್ನು ಹಿಂದಿರುಗಿಸಿದ್ದಾರೆ.''

''ಯಾಕಂತೆ?''

''ಅವರು ಈ ಅಬ್ಜಕ್ಷನ್‌ಗಳನ್ನು ಹಾಕಿದ್ದಾರೆ –

**ಒಂದು:** ನಿಮ್ಮ ಅಧಿಕಾರ ವ್ಯಾಪ್ತಿ ಮತ್ತು ಅಂತಸ್ತನ್ನು ಮೀರಿ ಆಕಾಶಯಾನ ಮಾಡಿದ್ದು ಸರಿಯಲ್ಲ.

**ಎರಡು:** ಶ್ರೀ ರಾಮನ ವಾಸಸ್ಥಳವನ್ನು ಬಿಟ್ಟು ಹೊರಗೆ ಹೋಗುವುದಕ್ಕೆ ರಾಜ ಭರತನ ಅನುಮತಿಯ ಪತ್ರ ಇಲ್ಲ.

**ಮೂರು:** ಸಂಜೀವಿನಿ ಮೂಲಿಕೆಯನ್ನು ಮಾತ್ರ ತರಲು ಹೇಳಿದರೆ, ನೀವು ಇಡೀ ಪರ್ವತವನ್ನೇ ತಂದಿದ್ದೀರಿ. ಇದಕ್ಕೆ ರಾಜನ ಖಜಾನೆ, ಅಧಿಕ ತೂಕದ ವೆಚ್ಚವನ್ನು ಭರಿಸಬೇಕಾಯಿತು.

''ಇದರ ಬಗ್ಗೆ ನೀವು ರಾಮನೊಂದಿಗೆ ಮಾತನಾಡಿದ್ದೀರಾ?'' ಅಂತ ಲಕ್ಷ್ಮಣ ಕೇಳಿದ.

''ಶ್ರೀ ರಾಮಚಂದ್ರ, ಆಡಳಿತ ಇಲಾಖೆಯವರ ಅಬ್ಜಕ್ಷನ್ಸ್ ಸರಿಯಾಗಿರುವುದರಿಂದ ತಾನು ಮಧ್ಯೆ ಪ್ರವೇಶ ಮಾಡುವುದಿಲ್ಲ ಅಂದು ಬಿಟ್ಟರು'' ಅಂತ ಹೇಳಿದ ಆಂಜನೇಯ.

''ಹಣಕಾಸು ಇಲಾಖೆಯಲ್ಲಿ ನಿಮ್ಮ ಕೇಸ್‌ನ್ನು ನೋಡಿದವರ ಹೆಸರೇನು?'' ಅಂದ ಲಕ್ಷ್ಮಣ.

''ಘಾಸಿಯರಾಂ.''

''ನೀನೇನೂ ಚಿಂತಿಸಬೇಡ ಪ್ರಿಯ ಹನುಮಂತ. ನಿನ್ನ ಬಿಲ್ಲನ್ನು ಮತ್ತೊಮ್ಮೆ ಕೊಡು, ಅದರೊಂದಿಗೆ ನಾನು ಕೊಡುವ ಚೀಟಿಯನ್ನು ಸೇರಿಸು.''

ಒಂದೆರಡು ದಿನಗಳಾದ ಮೇಲೆ, ಆಂಜನೇಯ ಸಂತೋಷವಾಗಿದ್ದಿದ್ದನ್ನು ನೋಡಿದ ಲಕ್ಷ್ಮಣ.

ನನಗೆ ಪ್ರಿಯವಾದ ಲಕ್ಷ್ಮಣ, ನನ್ನ ಬಿಲ್ ಸ್ಯಾಂಕ್ಷನ್ ಆಯಿತು. ನನಗೆ ಬರಬೇಕಾದ್ದು ಬಂತು. ಅದರೊಂದಿಗೆ ಈ ಚೀಟಿ ಇತ್ತು. ಈ ಚೀಟಿಯಲ್ಲಿ ಹೀಗೆ ಬರೆದಿದೆ – ''ನಿಮ್ಮ ಬಿಲ್ಲನ್ನು

ಮರು ಪರಿಶೀಲಿಸಲಾಗಿದೆ. ಈ ಕೆಳಗಿನ ಕಾರಣಗಳಿಗಾಗಿ ಅದನ್ನು ಮಂಜೂರು ಮಾಡಲಾಗಿದೆ.''

1. ಲಕ್ಷ್ಮಣನ ಆರೋಗ್ಯ ತುರ್ತಾಗಿ ಸುಧಾರಿಸಬೇಕಾಗಿದ್ದಿದ್ದರಿಂದ ಶ್ರೀ ರಾಮಚಂದ್ರ ಬಾಯಿಮಾತಿನಲ್ಲಿ ಸಂಜೀವಿನಿಯನ್ನು ತರಲು ಆಜ್ಞಾಪಿಸಿದ್ದರು. ಕೇಂದ್ರ ಸರ್ಕಾರದಿಂದ ಲಿಖಿತ ಸಮ್ಮತಿಯನ್ನು ಪಡೆದುಕೊಳ್ಳಲು ಕಾಲಾವಕಾಶ ಇರಲಿಲ್ಲ.
2. ತುರ್ತು ಪರಿಸ್ಥಿತಿಯಿದ್ದಿದ್ದರಿಂದ ಆಂಜನೇಯ ಆಕಾಶಯಾನ ಮಾಡಲೇಬೇಕಾಯಿತು. ಇದನ್ನು ಹಣಕಾಸು ಇಲಾಖೆ ಒಪ್ಪಿಕೊಂಡಿದೆ.
3. ತಾನು ತರಬೇಕಾದ ಸಂಜೀವಿನಿಯನ್ನು ಹುಡುಕಿ, ಅಕಸ್ಮಾತಾಗಿ ಬೇರೆ ಮೂಲಿಕೆಯನ್ನು ತಂದು, ಮತ್ತೆ ಮತ್ತೆ ಹೋಗಿ ಬರುವ ವೆಚ್ಚವನ್ನು ತಪ್ಪಿಸಲು ಇಡೀ ಪರ್ವತವನ್ನೇ ತಂದೆ ಎಂದು ಆಂಜನೇಯ ಹೇಳಿದ್ದಾರೆ. ಆದ್ದರಿಂದ 'ಅಧಿಕ ತೂಕ' ಎನ್ನುವ ಅಂಶವನ್ನು ಕೈಬಿಡಲಾಗಿದೆ.

ಈ ಕಾರಣಗಳಿಂದ ಹನುಮಂತನ ಬಿಲ್ಲನ್ನು ಸ್ಯಾಂಕ್ಷನ್ ಮಾಡಲಾಯಿತು. ಇಂದಿನ ನೀತಿ ನಿಯಮಾವಳಿ, ರೀತಿ ನೀತಿ ಅಂದೂ ಇತ್ತು.

*(ಆಧಾರಿತ)*

✷

## ಪುಟ 21ರ ಪದಬಂಧದ ಉತ್ತರ

| | | | | | | | | |
|---|---|---|---|---|---|---|---|---|
| | ಅ | | | | | ತ | ರಂ | ಗ |
| ರಂ | ಪ | | ರಾ | ಕ್ಷ | ಸ | | | ಜಾ |
| | ರಂ | | ವ | | ಮ | | | ನ |
| | ಜಿ | ಪು | ಣ | | ಯ | ಜ | ಮಾ | ನ |
| | | ಲ್ಲಿಂ | | | | ರ | | |
| ತ | ರ | ಗ | ತಿ | | ಕ | ಡಿ | ತ | |
| ರ | | | ರು | | ನ್ನ | | ಲೋ | |
| ಕಾ | | | ಕ | ರ | ಡಿ | | ದ | ರ |
| ರಿ | ಪೇ | ರಿ | | | | | ರಿ | |




ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಇಡೀ ದಿವಸದ ಉತ್ಸಾಹದ ಟಾನಿಕ್

- ಎಚ್. ಗೋಪಾಲಕೃಷ್ಣ

**ವೃ**ದ್ಧ ದಂಪತಿಗಳ ಜೋಡಿ ಪ್ರತಿದಿವಸ ಬೆಳಿಗ್ಗೆ ಏಳೂವರೆಗೆ ಸರಿಯಾಗಿ ಬಸ್ ಸ್ಟಾಪಿನಲ್ಲಿ ಬಂದು ಕೂರುತ್ತಿದ್ದರು. ಯಜಮಾನರಿಗೆ ಎಪ್ಪತ್ತು ವರ್ಷ ಇರಬಹುದು ಅವರ ಹೆಂಡತಿಗೆ ವಯಸ್ಸು ಕಮ್ಮಿ ಇದ್ದರೂ ಗಂಡನಿಗಿಂತಲೂ ಹೆಚ್ಚು ವಯಸ್ಸಾದ ಹಾಗೆ ಕಾಣುತ್ತಿದ್ದರು. ಬಸ್ ಸ್ಟಾಪಿಗೆ ಬಂದು ಅಲ್ಲಿ ಹಾಕಿದ್ದ ಗ್ರಾನೈಟ್ ಬೆಂಚಿನ ಮೇಲೆ ಕೂರುವ ಮೊದಲು ಅವರ ವಾಕಿಂಗ್ ಕೆಲಸ ಮುಗಿಸಿರುತ್ತಿದ್ದರು. ಬೆಂಚಿನ ಮೇಲೆ ಕೂತು ಅಲ್ಲಿ ಬಸ್ಸಿಗೆ ಕಾಯುತ್ತಾ ಅಮ್ಮಂದಿರ ಸಂಗಡ ಬಂದಿರುವ ಮಕ್ಕಳನ್ನು ನೋಡುತ್ತಾ ಪರಿಚಯದವರ ಕಡೆ ಕಣ್ಣು ಹಾಯಿಸುತ್ತಾ ತಿಳಿದವರನ್ನು ಮಾತನಾಡಿಸುತ್ತಾ ಒಂದು ಗಂಟೆಯ ಹೊತ್ತು ಅಲ್ಲಿ ಕಾಲ ಕಳೆದು ನಂತರ ಹೊರಡುತ್ತಿದ್ದರು. ಮನೆಯಿಂದ ಮಕ್ಕಳನ್ನು ಬಸ್ ಸ್ಟಾಪಿಗೆ ಕರೆತರುತ್ತಿದ್ದ ಅಮ್ಮಂದಿರು ಮಕ್ಕಳ ಟಿಫಿನ್ ಕ್ಯಾರಿಯರನ್ನೋ ಅವರ ಹೋಂವರ್ಕ್ ಪುಸ್ತಕವನ್ನೋ ಅಥವಾ ಮತ್ತೇನನ್ನೋ ಗಡಿಬಿಡಿಯಲ್ಲಿ ಮರೆತು ಬರುತ್ತಿದ್ದರು.

''ಅಂಕಲ್ ಡಬ್ಬಿ ಮರೆತು ಬಂದೆ. ಕೊಂಚ ಮಗೂನ ನೋಡ್ತಿರ್ತೀರಾ? ಮನೇಗೆ ಹೋಗಿ ಡಬ್ಬಿ ತಂದುಬಿಡ್ತೀನಿ...'' ಅಂತ ಮಗುವಿನ ಜವಾಬ್ದಾರಿಯನ್ನು ಇವರಿಗೆ ವಹಿಸಿ ಹೋಗುವುದು ದಿನನಿತ್ಯದ ಸಂಗತಿ. ಇವರೂ ಸಂತೋಷದಿಂದಲೇ ''ಹೋಗಿದ್ದು ಬಾಮ್ಮಾ. ಅಷ್ಟರಲ್ಲೇ ಸ್ಕೂಲಿನ ಬಸ್ಸು ಬಂದರೆ ಹತ್ತಿಸ್ತೀವಿ, ಯೋಚಿಸಬೇಡ...'' ಅಂತ ಹೇಳಿ ಮಗುವಿನ ಹೊರೆಯನ್ನು ಹೊತ್ತುಕೊಳ್ಳುತ್ತಿದ್ದರು.

ಬಸ್ಸು ಬರುವವರೆಗೆ ಮಕ್ಕಳ ಜಗಳ ಕದನ ಇವರೇ ಬಗೆಹರಿಸೋದೂ, ಬಸ್ಸು ಬಂದಾಗ ಮಕ್ಕಳನ್ನ ಸಾಲಾಗಿ ಬಸ್ಸಿನ ಒಳಗಡೆಗೆ ಹತ್ತಿಸೋದೂ ಜೋಪಾನ ಹುಷಾರು ಅಂತ ಹೇಳಿ ಮಕ್ಕಳನ್ನ ಅಕ್ಕರೆಯಿಂದ ಕಾಣೋದೂ ಮಾಡುತ್ತಿದ್ದರು. ಸಂಜೆ ಮಕ್ಕಳು ಸ್ಕೂಲಿನಿಂದ ಬರುವಾಗಲೂ ಅದೇ ಅಜ್ಜ ಅಜ್ಜಿ ಬಸ್ ಸ್ಟಾಪಿನಲ್ಲಿ ಕೂರುತ್ತಿದ್ದರು, ಮಕ್ಕಳು ಬಸ್ಸಿನಿಂದ ಇಳಿದು ಅವರ ಅಮ್ಮಂದಿರ ಸಂಗಡ ಹೋದ ನಂತರ ತಾವೂ ಹೊರಡುತ್ತಿದ್ದರು. ಮಗುವನ್ನು ಕರೆದುಕೊಂಡು ಹೋಗಲು ಆಗದ ಅಮ್ಮಂದಿರು ಬೆಳಿಗ್ಗೆಯೇ ಇವರಿಗೆ ಕೋರಿಕೆ ಸಲ್ಲಿಸುತ್ತಿದ್ದರು.

''ಅಂಕಲ್, ಸಾಯಂಕಾಲ ನಾನು ಬರೋದು ಸ್ವಲ್ಪ ತಡವಾಗುತ್ತೆ. ಹತ್ತು ನಿಮಿಷ ಮಗೂನ ಇಲ್ಲೇ ಕೂಡಿಸಿಕೊಂಡಿರಿ, ನಾನು ಬಂದು ಕರಕೊಂಡು ಹೋಗ್ತೀನಿ'' ಅಂತಲೋ ''ಅಂಕಲ್, ಇಲ್ಲೇ ಎರಡನೇ ರಸ್ತೆ ಕೊನೇ ಮನೆ ನಮ್ಮದು, ಮನೇಲಿ ಇದರ ಅಜ್ಜಿ ಇರುತ್ತೆ. ನಾನು ನಮ್ಮ ತಾಯಿ ಮನೇಗೆ ಹೋಗ್ತಾ ಇದೀನಿ, ಅಮ್ಮಂಗೆ ಹುಷಾರಿಲ್ಲ ಅದಕ್ಕೆ... ಸ್ವಲ್ಪ ಮನೆ ಹತ್ತಿರ ಮಗೂನ ಬಿಟ್ಟು ಬಿಡ್ತೀರಾ....?'' ಹೀಗೆ ಕೋರಿಕೆಗಳು ಅಮ್ಮಂದಿರಿಂದ

ಬರೋದೂ, ಇವರೂ ಆಗಲೀಮ್ಮಾ ತಾಯೀಗೆ ಹುಷಾರಿಲ್ಲವೇ ಪಾಪ, ಹೋಗಿದ್ದು ಬಾಮ್ಮಾ ಮಗು ಜವಾಬ್ದಾರಿ ನಮಗಿರಲಿ, ಮನೇಗೆ ಬಿಡ್ತೀವಿ ಮಗೂನ ... ಅಂತ ಹೇಳಿ ಕಳಿಸೋದೂ ವಾರಕ್ಕೆ ಎರಡು ಮೂರು ಸಲ ಪುನರಾವರ್ತನೆಯಾಗುತ್ತಿದ್ದ ಪ್ರಸಂಗ!

ಹೊಸದಾಗಿ ಈ ಏರಿಯಾಕ್ಕೆ ಮನೆ ಕಟ್ಟಿಕೊಂಡು ವಾಸ ಬಂದಿದ್ದ ನನ್ನ ಗೆಳೆಯ ಇದೇ ಬಸ್ ಸ್ಟಾಪಿನಿಂದ ಕಾರ್ಖಾನೆ ಬಸ್ಸು ಹತ್ತಬೇಕಿತ್ತು. ಪ್ರತಿದಿವಸ ಬೆಳಿಗ್ಗೆ ಈ ವೃದ್ಧರನ್ನು ನೋಡೋದು, ಅವರು ಮಕ್ಕಳ ಮೇಲೆ ತೋರಿಸುತ್ತಿದ್ದ ಪ್ರೀತಿಯನ್ನು ಅನುಭವಿಸೋದು ಮಕ್ಕಳ ಅಮ್ಮಂದಿರು ತಾತ ಅಜ್ಜಿ ಜತೆ ಇರಿಸಿಕೊಂಡಿರುವ ಸಂಪರ್ಕನೋಡಿ ಆಶ್ಚರ್ಯ ಪಡೋದೂ ನಡೀತಿತ್ತು.

ಬೆಳಿಗ್ಗೆ ಆರಕ್ಕೇ ಅಜ್ಜ ಅಜ್ಜಿ ಸವಾರಿ ಹೊರಡುತ್ತಿತ್ತು. ಅಜ್ಜ ಮಿಲಿಟರಿಯಲ್ಲಿ ಇದ್ದವರಂತೆ. ನೇರವಾಗಿ ಗೆರೆ ಹಾಕಿದ ಹಾಗೆ ಸಿಪಾಯಿಯ ಹಾಗೆ ಅವರು ಮುಂದೆ ಮುಂದೆ ವಾಕಿಂಗು ಹೋಗುತ್ತಿದ್ದರೆ ಒಂದು ಮಾರು ಹಿಂದೆ ಅವರ ಹೆಂಡತಿ – ಅಜ್ಜಿ ನಿಧಾನಕ್ಕೆ ನಡೆದುಬರೋದು. ಮುಂದಿನ ಅಜ್ಜ ಐದು ನಿಮಿಷಕ್ಕೆ ಒಮ್ಮೆ ನಿಂತು ಹಿಂದೆ ತಿರುಗಿ ಬೇಗ ಬರಬಾರದೇ ಅಂತ ಕೇಳೋದು, ಅಜ್ಜಿ ನಿಮ್ಮ ಪಾಡಿಗೆ ನೀವು ಹೋಗಿ, ನಿಮ್ಮ ಹಿಂದೇನೇ ನಾನೂ ಬರ್ತಿದೀನಿ... ಅಂತ ರೇಗೋದೂ... ಇದೆಲ್ಲ ನಮ್ಮೆದುರು ಹೇಳಿಕೊಂಡು ಗೆಳೆಯ ಪಾಪ ಮುದುಕರು ಅದು ಹೇಗೆ ಸಮಯ ಕಳಿತಾರೋ ಅಂತ ವ್ಯಥೆ ಪಡುತ್ತಿದ್ದ.

ಅವರಿಗೆ ಇಬ್ಬರು ಮಕ್ಕಳು ಇದ್ದಾರಂತೆ. ಇಬ್ಬರೂ ಹೊರದೇಶದಲ್ಲಿ ನೆಲೆಸಿಬಿಟ್ಟಿದ್ದಾರಂತೆ. ಇವರನ್ನೂ ಅಲ್ಲೀಗೇ ಬನ್ನಿ ಅಂತ ಕರೀತಾರಂತೆ. ಅಜ್ಜನಿಗೇನೋ ಅಲ್ಲೇ ಹೋಗಿ ಇದ್ದುಬಿಡೋಣ ಅಂತ ಇಷ್ಟವಂತೆ. ಆದರೆ ಅಜ್ಜಿ ಇದೆಯಲ್ಲಾ ಅದರದ್ದೇ ತಕರಾರು. ನಮ್ಮೂರು ನಾವು ಬಿಟ್ಟು ಬರೋಲ್ಲ ಅಂತ ಹಠವಂತೆ. ಮಕ್ಕಳು ಹೇಳಿ ಹೇಳೀ ಸಾಕಾಗಿ ಇವಾಗ ಸುಮ್ಮನಾಗಿದ್ದಾರಂತೆ.

''.....ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಕೊಳ್ಳಿ ನಿಮ್ಮ ಜವಾಬ್ದಾರಿ ಅವರು ತಗೋತಾರೆ, ನೀವು ಇಬ್ಬರೇ ಹೀಗೆ ದೊಡ್ಡ ಒಂಟಿ ಮನೇಲಿದ್ದರೆ ನಮಗೂ ಟೆನ್ಷನ್ನು'' ಅಂತ ಅವರ ಮಕ್ಕಳು ಅವಾಗವಾಗ ಇವರಿಗೆ ಫೋನು ಮಾಡಿ ಹೇಳ್ತಾರಂತೆ...

ಅಜ್ಜೀಗೂ ಅದು ಅಲ್ಲದೆ ವ್ರದ್ಧಾಶ್ರಮದಲ್ಲಿ ಇರೋದು ಇಷ್ಟ ಇಲ್ಲ. ಅಜ್ಜ ಅಜ್ಜೀಗೆ ಇಷ್ಟ ಇಲ್ಲ ಅಂದಮೇಲೆ ನನಗೂ ಇಷ್ಟ ಇಲ್ಲ ಅಂತ ಹೇಳುತ್ತಂತೆ... ಇದು ಕೆಲವು ದಿವಸಗಳ ನಂತರ ಗೆಳೆಯ ಅವರ ಬಗ್ಗೆ ಪತ್ತೇದಾರಿ ಮಾಡಿ ಸಂಗ್ರಹಿಸಿದ ಸುದ್ದಿ.

ಏಕೋ ಮೂರು ದಿವಸದಿಂದ ಅಜ್ಜ ಅಜ್ಜಿ ಇಬ್ಬರೂ ಬಸ್ ಸ್ಟಾಪಿನಲ್ಲಿ ಕಾಣಿಸ್ತಾ ಇಲ್ಲ... ಅಂತ ಕಳೆದ ತಿಂಗಳು ಕೊನೇ ವಾರದಲ್ಲಿ ಗೆಳೆಯ ಹೇಳಿದ. ಅವರ ಮನೆ ನೋಡಿದ್ದರೆ ಅಲ್ಲೀಗೆ ಹೋಗಿ ವಿಚಾರಿಸಬೇಕಿತ್ತು... ಅಂತ ಸಲಹೆ ನೀಡಿದೆ.

''...ಹುಡುಕಿಕೊಂಡು ಅವರ ಮನೇಗೂ ಹೋದೆ, ಬೀಗ ಹಾಕಿತ್ತು. ಮೂರು ದಿವಸದ ಪೇಪರೂ ಆಚೆ ಬಿದ್ದಿತ್ತು...'' ಅಂದ.

''....ಮಕ್ಕಳು ಬಂದು ಕರಕೊಂಡು ಹೋಗಿಬಿಟ್ಟರಾ ಅವರ ಜತೇಗೆ......?''

ತಿಳೀದು.... ಅಂದ.

ಒಂದು ತಿಂಗಳು ಅವರು ಕಾಣಿಸಲಿಲ್ಲ. ಒಂದು ತಿಂಗಳಾದ ಮೇಲೆ ಅಜ್ಜ ಒಂದೇ ಬಸ್ ಸ್ಟಾಪಿನಲ್ಲಿ ಬೆಳಿಗ್ಗೆ ಕಾಣಿಸಿಕೊಂಡರಂತೆ. ಗೆಳೆಯ ಅವರ ಬಳಿ ಓಡಿದ.

''....ಎಲ್ಲಿಗೆ ಹೋಗಿದ್ದಿರಿ ಅಜ್ಜಾ? ಒಂದು ತಿಂಗಳು ಆಯಿತಲ್ಲಾ ನಿಮ್ಮನ್ನ ನೋಡಿ....?''

ಅಜ್ಜ ಕಥೆ ಹೇಳಿದರಂತೆ. ಇದ್ದಕ್ಕಿದ್ದ ಹಾಗೇ ಅಜ್ಜೀಗೆ ರಾತ್ರಿ ಉಸಿರಾಟ ಕಷ್ಟವಾಯಿತು ಅಂತ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಅದೇನೇನೋ ಟೆಸ್ಟು, ಎಕ್ಸ್‌ರೇ ಎಲ್ಲಾ ಆದಮೇಲೆ ಹಾರ್ಟಿನ ತೊಂದರೆ ಇರೋದು ತಿಳೀತು, ಮೂರುವಾರ ಚಿಕಿತ್ಸೆ ತಗೊಂಡು ಅಜ್ಜಿ ಕಳೆದ ವಾರ ಮನೆಗೆ ಬಂದರಂತೆ. ಇವರೂ ಅಜ್ಜೀ ಸಂಗಡವೇ ಇದ್ದುಬಿಟ್ಟಿದ್ದರು ಅದಕ್ಕೇ ಇಲ್ಲೀಗೆ ಅವರು ಬರಲಿಲ್ಲ... ಅಜ್ಜಿ ಇನ್ನೂ ಚಿಕಿತ್ಸೆ ಪಡೀತಾ ಇದೆ..

ಪಾಪ ಮಕ್ಕಳು ನಮಗೋಸ್ಕರ ಕಾಯ್ತಾ ಇರುತ್ವೆ ನೀವು ಹೋಗಿ ಅಂತ ಬಲವಂತ ಮಾಡಿ ಅಜ್ಜಿ ಇವತ್ತು ಇವರನ್ನ ಕಳಿಸಿದೆ....

ಅವರ ಮಕ್ಕಳು ಬರಲಿಲ್ಲವಂತಾ ಫಾರಿನ್ ನಿಂದ? ಅಂತ ಕೇಳಿದೆ ತಡೆಯಲು ಆಗಲಿಲ್ಲ.

ಮಕ್ಕಳೂ ಬಂದರು ಸೊಸೇರೂ ಬಂದರು, ನೀವು ನಮ್ಮ ಜತೇನೇ ಬಂದು ಬಿಡಿ ಅಂತ ಬಲವಂತಾನೂ ಮಾಡಿದರಂತೆ...

ಪ್ರತಿದಿವಸ ಇಲ್ಲಿ ಇಷ್ಟೊಂದು ಮಕ್ಕಳನ್ನ ನೋಡ್ತೀವೀ, ಅವರ ಜತೆ ಆಟಪಾಟ ಆಡ್ತೀವಿ, ಅದರಿಂದ ನಮಗೂ ವಯಸ್ಸಾಗಿದೆ ಅಂತ ಅನಿಸೋದೇ ಇಲ್ಲ. ನಿಮ್ಮ ಜತೆ ಬಂದರೆ ಅಲ್ಲಿ ನಿಮ್ಮ ಎರಡು ಮಕ್ಕಳು ನಮಗೆ ಆಡುಕ್ಕೆ ಸಿಗುತ್ವೆ.... ಇಲ್ಲಿ ನಮ್ಮ ಜತೆ ಅದೆಷ್ಟು ಕೂಸಿದಾವೆ ನೋಡು... ನಮಗೆ ಈ ಮಕ್ಕಳ ಜತೆ ಇರೋದು ತಪ್ಪುತ್ತೆ ಬರೋಲ್ಲಾ ಅಂತ ಅಂದರಂತೆ.... ಅಂದ ಗೆಳೆಯ.

ಇದೇನು ಹುಚ್ಚೋ ಅಂದೆ.

ನಮಗಿದು ಅರ್ಥವಾಗೋಲ್ಲ ಬಿಡು. ನಮ್ಮನೆ ಹತ್ತಿರ ಇನ್ನೊಂದು ಸಂಸಾರ ಇದೆ. ಗಂಡ ಹೆಂಡತಿ ಇಬ್ಬರೂ ರಸ್ತೇಲಿರೋ ಮಕ್ಕಳನ್ನೆಲ್ಲಾ ಮನೇಲಿ ತುಂಬಿಕೊಂಡಿರ್ತಾರೆ. ಅವರ ಮನೇಲೂ ಮೂರು ಇವೆ. ಅದರ ಜತೇಗೆ ಇವು. ಮಕ್ಕಳ ಜತೆ ಅರ್ಧ ಗಂಟೆ ಕಳೆದರೆ ಅವರಿಗೆ ಅದೇನೋ ಇಡೀ ದಿವಸದ ಉತ್ಸಾಹ ಬರುತ್ತಂತೆ.... ಅಂದ!

ಮಕ್ಕಳ ಸಂಗಡ ಸಮಯ ಕಳೆದವರಿಗೆ ಅದರ ಮಹತ್ವ ಗೊತ್ತಿರುತ್ತೆ ಅನಿಸಿತು!

✷

---

**ಕೊನೆ ಆಸೆ?**

ನೂರು ವರ್ಷ ಸಂತೋಷದಿಂದ ಬಾಳಿ ಬದುಕಿದ ಮಹಿಳೆಯೊಬ್ಬಳಿಗೆ ಎದೆ ನೋವು ಕಾಣಿಸಿಕೊಂಡಿತು.
'ನಾನು ಉಳಿಯುವುದಿಲ್ಲ ಎನಿಸುತ್ತದೆ. ಆ ತಿಂಡಿ ಬೇಗ ಇತ್ತ ಕೊಡಿ' ಎನ್ನುವುದೆ?

# ಬ್ರೇಕಿಂಗ್ ನ್ಯೂಸ್
# ಶುದ್ಧ ಅಸುದ್ದಿ

- ಎಚ್ಚೆನ್ಎ

## ಮೇಲೇರಿದ ರುಪಾಯಿ

**ಬೆ**ಲೆಗಳು ಹೆಚ್ಚುತ್ತಿದ್ದರೂ ರುಪಾಯಿ ಬೆಲೆ ಮಾತ್ರ ಇಳಿಯುತ್ತಿದೆ ಎಂಬುದಲ್ಲವೇ ನಿಮ್ಮ (ನಮ್ಮ ಸಹ) ಕೊರಗು. ಆದರೆ ಇಲ್ಲಿದೆ ಒಂದು ಚಿಯರ್‌ಫುಲ್ ಸುದ್ದಿ. ಇಲ್ಲಿ ರುಪಾಯಿ ಮೇಲೆ ಹತ್ತಿದೆ. ಎಷ್ಟು ಎತ್ತರ ಎಂದರೆ ಸುಮಾರು 16,000 ಅಡಿ. ಅಷ್ಟೆತ್ತರದಲ್ಲಿದೆ ರುಪಾಯಿ. ಆದರೆ ಈ ರುಪಾಯಿ ನಮ್ಮ ನಿಮ್ಮ ಜೇಬಿನಲ್ಲಿರುವ ಕಾಂಚಾಣವಲ್ಲ. ಬದಲಿಗೆ ರುಪಾಯಿ ಎಂಬ ಹೆಸರಿನ ನಾಯಿ. ದಿಕ್ಕು ದೆಸೆ ಇಲ್ಲದಿದ್ದ ನಾಯಿಯೊಂದನ್ನು ಸಾಕಿದ ಷೆರ್ಪಾಗಳು ಅದಕ್ಕೆ ರುಪಾಯಿ ಎಂದು ಹೆಸರಿಟ್ಟು ತಮ್ಮ ಜತೆ ಪರ್ವತಾರೋಹಣಕ್ಕೆ ಕರೆದೊಯ್ಯುತ್ತಿದ್ದರು. ಇದೀಗ ಅದು ಇತ್ತೀಚೆಗೆ 16,000 ಅಡಿ ಎತ್ತರದ ಒಂದು ಬೇಸ್ ಕ್ಯಾಂಪ್ ತಲುಪಿತು ಎಂದು ಸುದ್ದಿ. ಈ ರುಪಾಯಿನ ಬೆಲೆಯಾದರೂ ಹೆಚ್ಚಿತಲ್ಲ ಹೋಗಲಿ ಬಿಡಿ.

★★★

## ಸೆಲ್ಫ್‌ಹೆಲ್ಪ್ ಅಂಗಡಿ

**ಬೆಂ**ಗಳೂರಿನ ಶಾಲೆಯೊಂದು ಪ್ರಾಮಾಣಿಕತೆಯಲ್ಲಿ ಪಾಠ ಕಲಿಸುತ್ತಿದೆಯಂತೆ ಅಕ್ಷರಶಃ. ಹೇಗೆಂದರೆ, ಆ ಶಾಲೆ ಮಕ್ಕಳಿಗಾಗಿ ಒಂದು ಅಂಗಡಿ ತೆರೆದಿದೆ. ಅಲ್ಲಿ ಪೆನ್ಸಿಲ್, ರಬ್ಬರ, ಸ್ಕೇಲ್, ಪೇಪರ್ ಮುಂತಾದ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ. ಆದರೆ ಅದಕ್ಕೆ ಮಾಲೀಕ ಇಲ್ಲ. ಐಟಂಗಳ ದರವನ್ನು ಅಲ್ಲೇ ನಮೂದಿಸಲಾಗಿದ್ದು ಮಕ್ಕಳು ತಮಗೆ ಬೇಕಾದ ವಸ್ತುಗಳನ್ನು ಕೊಂಡು ನಿಗದಿತ ಬೆಲೆಯನ್ನು ಅಲ್ಲಿಟ್ಟಿರುವ ಡಬ್ಬಕ್ಕೆ ಹಾಕಿ ಹೋಗಬೇಕು. ಇದುವರೆಗೂ ಯಾರೂ ಮೋಸ ಮಾಡಿಲ್ಲವಂತೆ. ಅಂದರೆ ಎಲ್ಲರೂ ದುಡ್ಡು ಹಾಕಿ ತಮಗೆ ಬೇಕಾದ ವಸ್ತು ತೆಗೆದುಕೊಂಡು ಹೋಗುತ್ತಿದ್ದಾರೆ. ಕೆಲವೊಮ್ಮೆ ನಿಗದಿತ ಬೆಲೆಗಿಂತಲೂ ಹೆಚ್ಚಾಗಿ ಡಬ್ಬಕ್ಕೆ ಹಾಕುತ್ತಿದ್ದಾರೆಂದು ಶಾಲೆ ಹೇಳಿದೆ. ಮೋಸ ಮಾಡಲು ಅವಕಾಶ ಸಿಕ್ಕಾಗಲೂ ಮೋಸ ಮಾಡದೆ ಇರುವವರೇ ನಿಜವಾದ ಪ್ರಾಮಾಣಿಕರು ಎಂಬುದಕ್ಕೆ ಆ ಮಕ್ಕಳು ಸಾಕ್ಷಿ. ಅವರು ಯಾರೂ ರಾಜಕಾರಣಿಗಳಾಗರು ಎಂದು ನಂಬಬಹುದೆ?

★★★

## ಯಾರು ಮೊದಲು?

**ಕ**ಳೆದ ತಿಂಗಳು ಅಮಿತಾಬ್ ಬಚ್ಚನ್ ದೇವಾಲಯದ ಬಗ್ಗೆ ಓದಿದಿರಿ. ಈ ಬಾರಿ ಅಂತಹುದೇ ದೇವಾಲಯದ ಬಗ್ಗೆ ತಿಳಿದುಕೊಳ್ಳೋಣ. ಈ ದೇವಾಲಯ ನಟ

ನಟಿಯರದ್ದಲ್ಲ. ಆದರೆ ಸಾಕ್ಷಾತ್ ಭಾರತ ಮಾತೆಯದು. ತಮಿಳು ನಾಡಿನ ಧರ್ಮಪುರಿ ಜಿಲ್ಲೆಯಲ್ಲಿ ಈ ದೇವಾಲಯ ನಿರ್ಮಿಸಲು 1923ರಿಂದಲೇ ಸಿದ್ಧತೆ ನಡೆದಿದ್ದು ಭಾರತ ಮಾತೆಯ ವಿಗ್ರಹ 1923ರಲ್ಲೇ ತಯಾರಿಸಿದ್ದರೂ ಪ್ರತಿಷ್ಠಾಪನೆಗೊಳ್ಳಲಾಗದೆ ಒಬ್ಬರ ಮನೆಯಲ್ಲಿ ಗೃಹಬಂಧನದಲ್ಲಿದೆ. ಕೆಂಪು ಪಟ್ಟಿ ಸೇರಿದಂತೆ ಹಲವಾರು ಕಾರಣಗಳಿಂದಾಗಿ ಈ ದೇವಾಲಯ ಮೇಲೆದ್ದಿಲ್ಲ. ಈ ಮಂದಿರದಲ್ಲಿ ಪೂಜಾರಿ ಇರುವುದಿಲ್ಲ ಮತ್ತು ಎಲ್ಲ ಧರ್ಮದವರಿಗೂ ಮುಕ್ತ ಪ್ರವೇಶ. ಬ್ರಿಟಿಷರಿಂದ ಭಾರತ ಬಿಡುಗಡೆಗೊಂಡಿದ್ದರೂ ಈ ಭಾರತಮಾತೆಗೆ ಮಾತ್ರ ಇನ್ನೂ ಬಿಡುಗಡೆಯ ಭಾಗ್ಯ ದೊರೆತಿಲ್ಲ. ಇದಕ್ಕೂ ಮೊದಲೇ ಮಧ್ಯೆ ಜಯಲಲಿತಾ ಅವರ ದೇವಾಲಯ ನಿರ್ಮಾಣಗೊಂಡರೇನು ಅಚ್ಚರಿ ಪಡಬೇಕಿಲ್ಲ. ಭಾರತಮಾತಾ ಕೆನ್ ವೈಟ್ ಇನ್ ತಮಿಳುನಾಡು, ನೊ?

★★★

**ತಾನಾಗೇ ತಾನೆ ರಿಚಾರ್ಜ್**

ರಸ್ತೆಯಡಿ ಕೇಬಲ್‌ಗಳನ್ನು ಹೂತಿಟ್ಟು ಅವುಗಳ ಮೇಲೆ ವಾಹನಗಳು ಚಲಿಸಿದಾಗ ಬ್ಯಾಟರಿ ತಾನಾಗೇ ತಾನೆ ರಿಚಾರ್ಜ್ ಆಗುವಂತಹ ವಿದ್ಯುತ್ ರಸ್ತೆಯೊಂದನ್ನು ದಕ್ಷಿಣ ಕೊರಿಯಾದಲ್ಲಿ ನಿರ್ಮಿಸಲಾಗಿದೆ ಎಂದು ವರದಿ. ಈ 12 ಕಿ.ಮೀ. ರಸ್ತೆ ವಿಶ್ವದಲ್ಲೇ ಏಕೈಕ ಎನ್ನಲಾಗಿದೆ. ನಮ್ಮಲ್ಲಿಯೂ ಹೀಗೇ ಮಾಡಬಹುದೇನೋ ಆದರೆ ಆ ಕೇಬಲ್‌ಗಳನ್ನು ರಸ್ತೆಗುಂಡಿಗಳ ಕೆಳಗೆ ಹೂತಿಡಬೇಕಾಗಿಬರಬಹುದು. ಏಕೆಂದರೆ ನಿಮಗೆ ಗೊತ್ತಿದ್ದಂತೆ ನಮ್ಮಲ್ಲಿ ರಸ್ತೆ ಇಲ್ಲವಲ್ಲ!

★★★

**ರಿಸೈಕ್ಲಿಂಗ್**

**ಯಾ**ವುದೋ ಒಂದು 50ರ ದಶಕದಲ್ಲಿ ರಚನೆಯಾದ ಕನ್ನಡ ನಾಟಕದಲ್ಲಿ ಒಂದೇ ಹಾರ ತಂದು ಅನೇಕರಿಗೆ ಹಾಕುವ ದೃಶ್ಯವಿದೆ. ಆಗ ರಿಸೈಕ್ಲಿಂಗ್ ಬಳಕೆಯಲ್ಲಿರಲಿಲ್ಲ. ಆ ದೃಶ್ಯದಿಂದ ಪ್ರೇಕ್ಷಕರಿಗೆ ನಗೆ ಬರಿಸುವುದೇ ಉದ್ದೇಶವಾಗಿತ್ತು. ಸಂಸದರಾಗಲು ಹೊರಟಿರುವ ನಮ್ಮ ನಾಯಕರೊಬ್ಬರು ಅಂತಹದುನ್ನೇ ಮಾಡಲು ಹೊರಟಿದ್ದಾರೆ. ಅವರು ಪ್ರಚಾರಕ್ಕೆ ಹಳ್ಳಿಯಿಂದ ಹಳ್ಳಿಗೆ ಹೊರಟಾಗ ಅವರ ಸಿಬ್ಬಂದಿ ಮೊದಲೇ ಒಂದು ಹಳ್ಳಿ ತಲುಪಿ ಹೂವಿನ ಹಾರಗಳನ್ನು ಜನರಿಗೆ ಕೊಡುತ್ತಾರೆ. ನಾಯಕರು ಅಲ್ಲಿ ಬಂದಾಗ ಜನ ಈ ಹಾರಗಳನ್ನು ಬಳಸಿ ಅವರಿಗೆ ಭವ್ಯ ಸ್ವಾಗತ ಕೋರುತ್ತಾರೆ. ಅವರು ಮುಂದಿನ ಹಳ್ಳಿಗೆ ಹೋಗುವಷ್ಟರಲ್ಲಿ ಈ ಹಾರಗಳನ್ನು ಕಲೆಹಾಕಿ ಅಲ್ಲಿಗೆ ತಲುಪಿಸಲಾಗುತ್ತದೆ. ಅಲ್ಲಿ ಈ ಆಕ್ಷನ್ ರಿಪ್ಲೆ. ಹೀಗೆ ಹಾರಗಳ ಮರುಬಳಕೆ ನಡೆಯುತ್ತದಂತೆ. ಇದು ಹೂ ಪೋಲಾಗುವುದನ್ನು ತಪ್ಪಿಸುವುದೋ ಅಥವಾ ದುಡ್ಡು ಉಳಿಸುವ ತಂತ್ರವೋ ತಿಳಿಯದು. ಅಂದಹಾಗೆ ಭಾಷಣಗಳೂ ಸಹ ರಿಸೈಕಲ್ ಆಗುತ್ತವೆ ಅಲ್ಲವೆ? ಪ್ರತಿ ಹಳ್ಳಿಯಲ್ಲೂ ಹೊಸದಾಗಿ ಹೇಳಲು ಏನಿರುತ್ತದೆ? ಅಥವಾ ನಮ್ಮ ನಾಯಕರಿಗೆ ಏನು ತಿಳಿದಿದೆ?

★★★